## ಎರಡನೇ ಕರ್ನಾಟಕ ಆಡಳಿತ ಸುಧಾರಣಾ ಆಯೋಗದ 6 ನೇ ವರದಿಯ ಕುರಿತು

### ಪತ್ರಿಕಾ ಪ್ರಕಟಣೆ

(ಟಿಪ್ಪಣಿ: ಈ ಪತ್ರಿಕಾ ಪ್ರಕಟಣೆಯು ಸಂಕ್ಷಿಪ್ತ ವಿವರಗಳನ್ನು ಮಾತ್ರ ಒಳಗೊಂಡಿದೆ, ಹೆಚ್ಚಿನ ವಿವರಗಳಿಗಾಗಿ ಸಂಪೂರ್ಣ 6ನೇ ವರದಿಯನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ವೆಬ್‌ಸೈಟ್– https://karc2.karnataka.gov.in)

ಕರ್ನಾಟಕ ಆಡಳಿತ ಸುಧಾರಣಾ ಆಯೋಗ–2ನ್ನು ಸರ್ಕಾರದ ಆದೇಶ ದಿನಾಂಕ:07.01.2021 ರಂತೆ ರಚಿಸಲಾಯಿತು. ಆಯೋಗವು ದಿನಾಂಕ:11.01.2021 ರಿಂದ ತನ್ನ ಕಾರ್ಯವನ್ನು ಪ್ರಾರಂಭಿಸಿತು. ಆಯೋಗವು ಈಗಾಗಲೇ 5 ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿದೆ. ಒಟ್ಟು 23 ಇಲಾಖೆಗಳಿಗೆ ಸಂಬಂಧಿಸಿದಂತೆ 3630 ಶಿಫಾರಸುಗಳನ್ನು ಮಾಡಿದೆ. ಇಂದು 6ನೇ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ.

### 1. ಅನುಸರಿಸಿದ ವಿಧಾನಗಳು

ದಿನಾಂಕ: 11.01.2021 ರಿಂದ ದಿನಾಂಕ 31.10.2023 ರ ನಡುವೆ 30 ಜಿಲ್ಲೆಗಳಿಗೆ, 74 ತಾಲ್ಲೂಕುಗಳಿಗೆ, 171. ನಗರ/ಪಟ್ಟಣಗಳಿಗೆ ಮತ್ತು 53 ಗ್ರಾಮ ಪಂಚಾಯತ್‌ಗಳಿಗೆ ಹಾಗೂ 298 ಕಚೇರಿಗಳಿಗೆ/ಸಂಸ್ಥೆಗಳಿಗೆ ಭೇಟಿ ನೀಡಿ 4564 ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು ಮತ್ತು ನಾಗರಿಕರನ್ನು ಭೇಟಿ ಮಾಡಲಾಯಿತು. 511 ಸಭೆಗಳನ್ನು ನಡೆಸಲಾಗಿದ್ದು ಇದರಲ್ಲಿ ಭಾಗವಹಿಸಿದವರ ಸಂಖ್ಯೆ ಸುಮಾರು 7647. ಕಾಲ್ ಸೆಂಟರ್ ಮೂಲಕ ರಾಜ್ಯ ಸರ್ಕಾರದ ನಾಗರೀಕ ಸೇವೆಗಳನ್ನು ಪಡೆದ 25522 ಬಳಕೆದಾರರಿಂದ ಪ್ರತಿಕ್ರಿಯೆಗಳನ್ನು ಪಡೆಯಲಾಗಿದೆ.

### 2. 6ನೇ ವರದಿ

ಆಯೋಗವು ತನ್ನ 6ನೇ ವರದಿಯಲ್ಲಿ 7 ಇಲಾಖೆಗಳನ್ನು ಅಧ್ಯಯನ ಮಾಡಿ ತನ್ನ ಶಿಫಾರಸ್ಸುಗಳನ್ನು ಸಲ್ಲಿಸಿದೆ. ಇದಲ್ಲದೇ, ಇತರ ಇಲಾಖೆಗಳಿಗೆ ಸಂಬಂಧಿಸಿದ ಸಾಮಾನ್ಯ ಶಿಫಾರಸುಗಳನ್ನು ಸಹ ಮಾಡಿದೆ. ಇದಲ್ಲದೇ, ಕೆಲವು ವಿಶಿಷ್ಠ ಕ್ಷೇತ್ರಗಳ ಬಗ್ಗೆ ಐಐಎಂ, ಬೆಂಗಳೂರು, ನ್ಯಾಷನಲ್ ಲಾಸ್ಕೂಲ್ ಆಫ್ ಇಂಡಿಯನ್ ಯೂನಿವರ್ಸಿಟಿ (ಎನ್‌ಎಲ್‌ಎಸ್‌ಐಯು), ವಿಧಿ ಸೆಂಟರ್ ಫಾರ್ ಲೀಗಲ್ ಪಾಲಿಸಿ, ಅಜೀಂ ಪ್ರೇಂಜಿ ವಿಶ್ವವಿದ್ಯಾಲಯ, ಪಬ್ಲಿಕ್ ಅಫೇರ್ಸ್ ಸೆಂಟರ್, ಪಬ್ಲಿಕ್ ಅಫೇರ್ಸ್ ಫೌಂಡೇಶನ್ ವತಿಯಿಂದ ಅಧ್ಯಯನ ವರದಿಗಳನ್ನು ಪಡೆದು ಅವುಗಳ ಆಧಾರದ ಮೇಲೆ ಶಿಫಾರಸುಗಳನ್ನು ಮಾಡಿದೆ.

### 3. 6ನೇ ವರದಿಯಲ್ಲಿನ ಶಿಫಾರಸುಗಳ ಸಾರಾಂಶದ ವಿವರ

| ಕ್ರ.ಸಂ | ಇಲಾಖೆಗಳ ಹೆಸರು/ವಿಷಯ | ಒಟ್ಟು ಶಿಫಾರಸುಗಳು |
|---|---|---|
| 1 | ವಸತಿ ಇಲಾಖೆ | 109 |
| 2 | ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ | 150 |
| 3 | ಜಲಸಂಪನ್ಮೂಲ ಇಲಾಖೆ | 83 |
| 4 | ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ | 58 |
| 5 | ಲೋಕೋಪಯೋಗಿ ಇಲಾಖೆ | 85 |
| 6 | ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ | 223 |
| 7 | ಮೂಲಸೌಕರ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ | 48 |
| 8 | ಸಾಮಾನ್ಯ ಶಿಫಾರಸುಗಳು | 55 |

| | | |
|---|---|---|
| 9 | ಐಐಎಂ, ಬೆಂಗಳೂರು, ನ್ಯಾಷನಲ್ ಲಾಸ್ಕೂಲ್ ಆಫ್ ಇಂಡಿಯನ್ ಯೂನಿವರ್ಸಿಟಿ (ಎನ್‌ಎಲ್‌ಎಸ್‌ಐಯು), ವಿಧಿ ಸೆಂಟರ್ ಫಾರ್ ಲೀಗಲ್ ಪಾಲಿಸಿ, ಅಜೀಂ ಪ್ರೇಂಜಿ ವಿಶ್ವವಿದ್ಯಾಲಯ, ಪಬ್ಲಿಕ್ ಅಫೇರ್ಸ್ ಸೆಂಟರ್, ಪಬ್ಲಿಕ್ ಅಫೇರ್ಸ್ ಫೌಂಡೇಶನ್ ಅಧ್ಯಯನ ವರದಿಗಳು | 71 |
| | **ಒಟ್ಟು ಶಿಫಾರಸುಗಳು** | 882 |

| ವರದಿಗಳು | ಸಲ್ಲಿಸಿದ ದಿನಾಂಕ | ವರದಿಯಲ್ಲಿನ ಇಲಾಖೆಗಳು | ಶಿಫಾರಸುಗಳ ಸಂಖ್ಯೆ |
|---|---|---|---|
| 1ನೇ ವರದಿ | 3ನೇ ಜುಲೈ, 2021 | 3 | 856 |
| 2 ಮತ್ತು 3ನೇ ವರದಿಗಳು | 18ನೇ ಫೆಬ್ರವರಿ, 2022 | 8 | 1165 |
| 4 ಮತ್ತು 5ನೇ ವರದಿಗಳು | ಜನವರಿ, 2023 | 12 | 1609 |
| 6ನೇ ವರದಿ | ನವೆಂಬರ್, 2023 | 7 | 882 |
| 06 ವರದಿಗಳಲ್ಲಿ ಮಾಡಿದ ಒಟ್ಟು ಶಿಫಾರಸುಗಳು | | | 4512 |

## I. ಬಳಕೆದಾರರಿಂದ ಬಂದ ಪ್ರತಿಕ್ರಿಯೆಗಳು

ಕಾಲ್ ಸೆಂಟರ್ ಮೂಲಕ 23 ಇಲಾಖೆಗಳ 138 ನಾಗರಿಕ ಸೇವೆಗಳ ಒಟ್ಟು 74,108 ಬಳಕೆದಾರರಿಗೆ ಕರೆ ಮಾಡಲಾಗಿದೆ. ಕರೆ ಮಾಡಲಾದ 74,108 ಬಳಕೆದಾರರ ಪೈಕಿ 25,522 (34%) ಬಳಕೆದಾರರು ಪ್ರತಿಕ್ರಿಯೆ ನೀಡಿದರು. ಅವರು ವ್ಯಕ್ತಪಡಿಸಿದ ಪ್ರಮುಖ ಬೇಡಿಕೆಗಳೆಂದರೆ:–

- ಸಕಾಲದಲ್ಲಿ ಸೇವೆಗಳನ್ನು ಒದಗಿಸುವುದು.
- ಬಳಕೆದಾರರಿಗೆ ಅನುಕೂಲವಾಗುವಂತೆ ಮಾಡುವುದು.
- ಅರ್ಜಿದಾರರಿಗೆ ಮಾಹಿತಿ ಒದಗಿಸುವುದು.
- ಕಚೇರಿಗಳಲ್ಲಿ ಉತ್ತಮ ಗುಣಮಟ್ಟದ ಸಂವಹನವನ್ನು ಖಚಿತಪಡಿಸಿಕೊಳ್ಳುವುದು.
- ಬಳಕೆದಾರ ಸ್ನೇಹಿಯಾದ ವೆಬ್‌ಸೈಟ್ ಮತ್ತು ತಂತ್ರಜ್ಞಾನ.
- ಕಚೇರಿಗಳಲ್ಲಿ ದಲ್ಲಾಳಿಗಳಿಲ್ಲದಂತೆ ನೋಡಿಕೊಳ್ಳುವುದು.

## II. ಸಾಮಾನ್ಯ ಶಿಫಾರಸುಗಳು

1. ಇ–ಆಫೀಸ್‌ನ್ನು ಕೇಂದ್ರ ಕಚೇರಿ, ಜಿಲ್ಲಾ ಮತ್ತು ತಾಲ್ಲೂಕು ಕಚೇರಿಗಳು ಸೇರಿದಂತೆ ಅನೇಕ ಕಚೇರಿಗಳಲ್ಲಿ ಬಳಸುತ್ತಿಲ್ಲ. ಈ ಎಲ್ಲಾ ಕಚೇರಿಗಳು ಈಗಾಗಲೇ ಕನಿಷ್ಠ ಸಂಖ್ಯೆಯ ಗಣಕಯಂತ್ರಗಳು, ಸ್ಕ್ಯಾನರ್, ಪ್ರಿಂಟರ್ ಮತ್ತು ಯುಪಿಎಸ್‌ಗಳನ್ನು ಹೊಂದಿವೆ, ಇದರೊಂದಿಗೆ ಅವರು ಪತ್ರವ್ಯವಹಾರಕ್ಕಾಗಿ ಮತ್ತು ಉನ್ನತ ಕಚೇರಿಗಳಿಗೆ ಕಡತಗಳನ್ನು ಕಳುಹಿಸಲು ಇ–ಆಫೀಸ್‌ನ್ನು ಬಳಸಲು ಪ್ರಾರಂಭಿಸಬಹುದು. **ಅಧೀನ ಕಚೇರಿಗಳು ಭೌತಿಕ ಕಡತಗಳ ಬದಲು ಇ–ಆಫೀಸ್ ಮೂಲಕ ಮಾತ್ರ ಕಡತಗಳು ಮತ್ತು ಪ್ರಸ್ತಾವನೆಗಳನ್ನು ಕಳುಹಿಸಬೇಕೆಂದು ಸರ್ಕಾರವು ಆದೇಶ ಹೊರಡಿಸಬಹುದು. ತಾಲ್ಲೂಕು ಕಚೇರಿಗಳು ಮತ್ತು ಉನ್ನತ ಕಚೇರಿಗಳು ಭೌತಿಕ ಕಡತಗಳನ್ನು ಅಂಚೆ ಮೂಲಕ ಅಥವಾ ಮುದ್ದಾಂ ತಲುಪಿಸುವಂತೆ ಒತ್ತಾಯಿಸುವ ಬದಲು ಅವಲೋಕನ ತಂತ್ರಾಂಶವನ್ನು ಬಳಸಿ ಆನ್‌ಲೈನ್ ಮೂಲಕ ಮಾಸಿಕ ಮೇಲ್ವಿಚಾರಣಾ ವರದಿಗಳನ್ನು ಕಳುಹಿಸಲು ಇಲಾಖೆ ಕಡ್ಡಾಯಗೊಳಿಸಬಹುದು. ಇ–ಪಾರ್ ಮತ್ತು ಇ–ಸೇವಾವಹಿ ಅನುಷ್ಠಾನಕ್ಕೆ ಕಾಲಮಿತಿಯನ್ನು ನಿಗದಿಪಡಿಸಿ ಸರ್ಕಾರ ಆದೇಶ ಹೊರಡಿಸಬಹುದು.**

2. 1960 ರಲ್ಲಿ ಮತ್ತು ನಂತರದ ದಶಕಗಳಲ್ಲಿ ವಿವಿಧ ಕಾಯ್ದೆಗಳು ಮತ್ತು ನಿಯಮಗಳನ್ನು ಜಾರಿಗೆ ತರಲಾಯಿತು. ಈ ಕಾಯ್ದೆಗಳು ಮತ್ತು ನಿಯಮಗಳಲ್ಲಿನ ಅನೇಕ ಶುಲ್ಕ, ದಂಡ ಮತ್ತು ಶಿಕ್ಷೆಯ ಉಪಬಂಧಗಳನ್ನು ಪರಿಷ್ಕರಿಸಿರುವುದಿಲ್ಲ. ಹೆಚ್ಚಿನ ಪ್ರಕರಣಗಳಲ್ಲಿ, ದಾವೆಯ ವೆಚ್ಚವು ನಿಗದಿಪಡಿಸಿದ ದಂಡದ ಮೊತ್ತಕ್ಕಿಂತ ಅನೇಕ ಪಟ್ಟು ಹೆಚ್ಚಾಗಿರುವುದು ಕಂಡುಬರುತ್ತದೆ. **ಆದ್ದರಿಂದ ದಂಡದ ನಿಬಂಧನೆ/ಉಪಬಂಧಗಳನ್ನು ಹಣದುಬ್ಬರ ಸೂಚ್ಯಂಕದ ಹೆಚ್ಚಳವನ್ನು ಆಧರಿಸಿ ಪರಿಷ್ಕರಿಸುವ ಅವಶ್ಯಕತೆಯಿದೆ. ಇದರಿಂದ ಅಪರಾಧಗಳನ್ನು ಸಹ ಪರಿಣಾಮಕಾರಿಯಾಗಿ ತಡೆಗಟ್ಟಬಹುದು.** (ಉದಾ. ಅರಣ್ಯ ಉತ್ಪನ್ನಗಳ ಸಾಗಣೆಗೆ ದಂಡ ರೂ 500 ಇದನ್ನು 1964ರಲ್ಲಿ ನಿಗದಿಪಡಿಸಲಾಗಿದೆ).

3. ಎಲ್ಲಾ ಇಲಾಖೆಗಳಲ್ಲಿ ಪ್ರಥಮ ದರ್ಜೆ ಸಹಾಯಕರ ಮತ್ತು ದ್ವಿತೀಯ ದರ್ಜೆ ಸಹಾಯಕರ ಮತ್ತು ಇತರ ಲಿಪಿಕ ಹುದ್ದೆಗಳು ಖಾಲಿ ಇವೆ. ಎಚ್‌ಆರ್‌ಎಂಎಸ್, ಖಜಾನೆ–2, ಇ–ಆಫೀಸ್, ಇ–ಪಾರ್ ಮತ್ತು ಇ–ಸೇವಾವಹಿಗಳನ್ನು ಅಳವಡಿಸಿಕೊಳ್ಳುವುದರಿಂದ ಲಿಪಿಕ ಕೆಲಸವು ಗಣನೀಯವಾಗಿ ಕಡಿಮೆಯಾಗುತ್ತದೆ. ಹೆಚ್ಚಿನ ಪ್ರಥಮ ದರ್ಜೆ ಸಹಾಯಕ ಮತ್ತು ದ್ವಿತೀಯ ದರ್ಜೆ ಸಹಾಯಕ ಹುದ್ದೆಗಳನ್ನು ಮುಂದುವರಿಸುವ ಅಗತ್ಯವಿಲ್ಲ. ಸರ್ಕಾರವು **ಪ್ರತಿ ಇಲಾಖೆಯಲ್ಲಿ ಈ ಹುದ್ದೆಗಳನ್ನು ಪರಿಶೀಲಿಸುವುದು ಮತ್ತು ಪುನರ್‌ವ್ಯವಸ್ಥೆಗೊಳಿಸುವುದು ಅಥವಾ ತಾಂತ್ರಿಕ ಹುದ್ದೆಗಳಾಗಿ ಪರಿವರ್ತಿಸುವುದನ್ನು ಪರಿಗಣಿಸಬಹುದು** (ಉದಾ: ಅರಣ್ಯ ಇಲಾಖೆಯಲ್ಲಿ ಅರಣ್ಯ ರಕ್ಷಕರಾಗಿ).

4. **ಗ್ರೂಪ್–ಸಿ ಮತ್ತು ಗ್ರೂಪ್–ಡಿ ಸಿಬ್ಬಂದಿಗಳು ಶಿಶುಪಾಲನಾ ರಜೆ, ಕಾಲ ಮಿತಿ ವೇತನ ಬಡ್ತಿ, ಸ್ಥಗಿತ ವೇತನ ಬಡ್ತಿ ಮತ್ತು ವೈದ್ಯಕೀಯ ಮರುಪಾವತಿಯಂತಹ ಪ್ರಯೋಜನಗಳನ್ನು ಮಂಜೂರಾತಿ ಪಡೆಯಲು ಅನೇಕ ತಿಂಗಳು ಅಥವಾ ವರ್ಷಗಳವರೆಗೆ ಕಾಯಬೇಕಾಗುತ್ತದೆ. ಏಕೆಂದರೆ, ಅವುಗಳನ್ನು ಮಂಜೂರು ಮಾಡುವ ಅಧಿಕಾರವು ಇಲಾಖೆಗಳ ಪ್ರಧಾನ ಕಚೇರಿಗಳಲ್ಲಿ ಕೇಂದ್ರೀಕೃತವಾಗಿರುತ್ತದೆ. ಗ್ರೂಪ್–ಸಿ ಮತ್ತು ಗ್ರೂಪ್–ಡಿ ನೌಕರರಿಗೆ ಅಂತಹ ಪ್ರಯೋಜನಗಳನ್ನು ಮಂಜೂರು ಮಾಡುವ ಅಧಿಕಾರವನ್ನು ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಬಹುದು.** ಗ್ರೂಪ್–ಬಿ ನೌಕರರಿಗೂ ಸಹ ಶಿಶುಪಾಲನಾ ರಜೆ ಮಂಜೂರು ಮಾಡುವ ಅಧಿಕಾರವನ್ನು ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಬಹುದು.

## III. ವಸತಿ ಇಲಾಖೆ

### ಕರ್ನಾಟಕ ಗೃಹ ಮಂಡಳಿ ಮತ್ತು ರಾಜೀವ್ ಗಾಂಧಿ ವಸತಿ ನಿಗಮ

5. ಇ–ಆಡಳಿತ ಇಲಾಖೆಯು ರಾಜ್ಯದ ಕುಟುಂಬಗಳ ಆದಾಯ, ಶಿಕ್ಷಣ, ಉದ್ಯೋಗ, ವಸತಿ, ಗೃಹಸಂಪನ್ಮೂಲ ಇತ್ಯಾದಿಗಳ ಆಧಾರದ ಮೇಲೆ Multi Dimension Deprivation Indexನ್ನು ಅಭಿವೃದ್ಧಿಪಡಿಸಿದೆ. **ಈ ಸೂಚ್ಯಂಕವನ್ನು ರಾಜ್ಯವಲಯದ ವಸತಿ ಮತ್ತು ನಿವೇಶನ ಯೋಜನೆಗಳಿಗೆ ಫಲಾನುಭವಿಗಳ ಆಯ್ಕೆಯ ನಿಯತಾಂಕಗಳಲ್ಲಿ ಸೇರಿಸಬಹುದು ಮತ್ತು ಪರಿಗಣಿಸಬಹುದು.**

6. **ಕರ್ನಾಟಕ ಗೃಹ ಮಂಡಳಿಯಲ್ಲಿ ಲೇಔಟ್ ರಚನೆಗೆ ಹಲವು ವರ್ಷಗಳು ಬೇಕಾಗುತ್ತದೆ. ಕಾರಣ ಲೇಔಟ್ ಯೋಜನೆಗಳಿಗೆ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯು ವಿಳಂಬವಾಗಿ ಅನುಮೋದನೆ ನೀಡುವುದಾಗಿದೆ. ಕೆಎಚ್‌ಬಿಯಲ್ಲಿ ನಗರ ಯೋಜನೆ ವಿಭಾಗದ ಹೆಚ್ಚುವರಿ ನಿರ್ದೇಶಕರ ಹುದ್ದೆ ಇದ್ದು, ಅವರು ಕೆಎಚ್‌ಬಿ ಸಿದ್ಧಪಡಿಸಿದ ಲೇಔಟ್‌ಗಳನ್ನು ಪರಿಶೀಲಿಸುತ್ತಾರೆ. ಆದ್ದರಿಂದ, ವಸತಿ ಇಲಾಖೆಯು ಕೆಟಿಸಿಪಿ ಕಾಯ್ದೆ, 1961ರ ಕಲಂ 81ನ್ನು ತಿದ್ದುಪಡಿ ಮಾಡಿ ಕೆಹೆಚ್‌ಬಿಯನ್ನು ಸ್ಥಳೀಯ ಪ್ರಾಧಿಕಾರವೆಂದು ಅಧಿಸೂಚಿಸಲು ಇಲಾಖೆಯು ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾಪಿಸಬಹುದು. ಪರ್ಯಾಯವಾಗಿ ಅನುಮೋದಿತ ಮಾಸ್ಟರ್ ಪ್ಲಾನ್‌ಗಳಿಗೆ ಅನುಗುಣವಾಗಿರುವ ಮತ್ತು ನಗರ ಯೋಜನೆ ಕೆಎಚ್‌ಬಿಯ ಹೆಚ್ಚುವರಿ ನಿರ್ದೇಶಕರವರಿಂದ ಅನುಮೋದನೆ ಪಡೆದ ಲೇಔಟ್‌ಗಳಿಗೆ ಅನುಮೋದನೆ ನೀಡಲು ಮಂಡಳಿ ಮತ್ತು ಆಯುಕ್ತರಿಗೆ ಅಧಿಕಾರ ಪ್ರತ್ಯಾಯೋಜಿಸಲು, ಕೆಎಚ್‌ಬಿ ಕಾಯ್ದೆ, 1963 ರ ಕಲಂ 32ಎ ಅನ್ನು ತಿದ್ದುಪಡಿ ಮಾಡಲು ಪ್ರಸ್ತಾಪಿಸಬಹುದು.**

7. **ಆರ್ಥಿಕವಾಗಿ ಹಿಂದುಳಿದ ವರ್ಗ (ಇಡಬ್ಲ್ಯೂಎಸ್) ಫಲಾನುಭವಿಗಳಿಗೆ ನಿವೇಶನಗಳ ಹಂಚಿಕೆಯನ್ನು ಅರ್ಜಿದಾರರ ಆಧಾರ್ ಸಂಖ್ಯೆಗಳನ್ನು ಪಡೆದು, ಕುಟುಂಬ ಡೇಟಾಬೇಸ್, ರಾಜೀವ್ ಗಾಂಧಿ ವಸತಿ ನಿಗಮದ ಹಂಚಿಕೆದಾರರ ಪಟ್ಟಿಯನ್ನು ಪರಿಶೀಲಿಸುವ ಮೂಲಕ ಮತ್ತು ಇ–ಖಾತಾ, ಇ–ಸ್ವತ್ತು, ಬಿಡಿಎ ಮತ್ತು ಬಿಬಿಎಂಪಿ**

**ಡೇಟಾಬೇಸ್‌ಗಳೊಂದಿಗೆ ಲಿಂಕ್ ಮಾಡುವ ಮೂಲಕ ಮಾಡಬೇಕು.** ಇದು ಈಗಾಗಲೇ ನಿವೇಶನ ಅಥವಾ ಮನೆ ಹೊಂದಿರುವ ಅನರ್ಹ ಅರ್ಜಿದಾರರನ್ನು ಮತ್ತು ಒಂದೇ ಕುಟುಂಬದ ಅನೇಕ ಅರ್ಜಿದಾರರನ್ನು ಗುರುತಿಸಿ ತೆಗೆದುಹಾಕಲು ಸಹಾಯಮಾಡುತ್ತದೆ.

8. ಕೆಎಚ್‌ಬಿಯು 2013ರಲ್ಲಿ ಕಟ್ಟಡ ನಕ್ಷೆಯ ಅನುಮೋದನೆಗಾಗಿ ರೂ 1000ಗಳ ಶುಲ್ಕವನ್ನು ನಿಗದಿಪಡಿಸಿತ್ತು. ಶುಲ್ಕವನ್ನು ಕಟ್ಟಡದ ಅಂದಾಜುವೆಚ್ಚದ ಶೇಕಡಾವಾರು ನಿಗದಿಪಡಿಸಬೇಕು. ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಮಂಡಳಿಯು ಕಟ್ಟಡದ ಅಂದಾಜುವೆಚ್ಚದ ಶೇ.1 ರಷ್ಟು ಕಾರ್ಮಿಕ ಸೆಸ್ ಸಂಗ್ರಹಿಸುತ್ತದೆ ಎಂಬುದನ್ನು ಗಮನಿಸಬಹುದು. ಅನೇಕ ಪ್ರಕರಣಗಳಲ್ಲಿ, ಸಂಗ್ರಹಿಸಲಾದ ಕಾರ್ಮಿಕ ಸೆಸ್ ಕಟ್ಟಡ ಅನುಮೋದನೆ ಶುಲ್ಕ ಮತ್ತು ಕೆಎಚ್‌ಬಿಯು ವಿಧಿಸುವ ಇತರ ಶುಲ್ಕಗಳಿಗಿಂತ ಹೆಚ್ಚಾಗಿದೆ. **ಆದ್ದರಿಂದ, ಕೆಎಚ್‌ಬಿಯು ಕಟ್ಟಡ ವಿನ್ಯಾಸ ನಕ್ಷೆ ಅನುಮೋದನೆ ಶುಲ್ಕವನ್ನು ಕಟ್ಟಡದ ಅಂದಾಜು ವೆಚ್ಚದ ಶೇಕಡಾವಾರು ನಿಗದಿಪಡಿಸಲು ಶಿಫಾರಸು ಮಾಡಲಾಗಿದೆ.**

9. ಕೆಎಚ್‌ಬಿಯ ಅನೇಕ ಲೇಔಟ್‌ಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಿದ ಅನೇಕ ವರ್ಷಗಳ ನಂತರವೂ ಹೆಚ್ಚಿನ ಸಂಖ್ಯೆಯ ನಿವೇಶನಗಳು ಖಾಲಿ ಇವೆ. ಇದು ಲೇಔಟ್‌ಗಳನ್ನು ರಚಿಸುವ ಉದ್ದೇಶವನ್ನು ವಿಫಲಗೊಳಿಸುವುದಲ್ಲದೇ ಮನೆಗಳನ್ನು ನಿರ್ಮಿಸುವ ಇತರರನ್ನು ವಂಚಿತರನ್ನಾಗಿ ಮಾಡುತ್ತದೆ. ದೀರ್ಘಕಾಲದವರೆಗೆ ನಿವೇಶನಗಳನ್ನು ಖಾಲಿ ಇಟ್ಟಿರುವ ಮಾಲೀಕರಿಗೆ ದಂಡ ವಿಧಿಸಬೇಕು. **ಕೆಎಚ್‌ಬಿಯು ಖಾಲಿ ನಿವೇಶನಗಳ ಸಂಪೂರ್ಣ ಕ್ರಯಪತ್ರವನ್ನು ನೋಂದಾಯಿಸಲು ನಿವೇಶನದ ಪ್ರಸ್ತುತ ಮಾರ್ಗಸೂಚಿ ದರದ ಶೇ.25 ರಷ್ಟು ದಂಡವನ್ನು ನಿಗದಿಪಡಿಸಬಹುದು. ಎರಡನೆಯದಾಗಿ, ಖಾಲಿ ನಿವೇಶನಗಳ ಮೇಲೆ ವಿಧಿಸಲಾಗುವ ನಿರ್ವಹಣಾ ಶುಲ್ಕವು ನಿರ್ಮಿಸಲಾದ ಮನೆಗಳ ಮೇಲೆ ವಿಧಿಸುವ ಖಾಲಿ ಭೂಶುಲ್ಕಕ್ಕಿಂತ ದುಪ್ಪಟ್ಟಾಗಿರಬಹುದು.**

### ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

10. ಸುಮಾರು 2.16 ಲಕ್ಷ ಕೊಳಗೇರಿಯಲ್ಲಿ ವಾಸಿಸುವ ಕುಟುಂಬಗಳಿಗೆ ಹಕ್ಕುಪತ್ರಗಳನ್ನು ನೀಡಬೇಕಾಗಿದೆ. **ವಸತಿ ಇಲಾಖೆಯು ಕೆಎಸ್‌ಡಿಬಿಗೆ ಹಕ್ಕುಪತ್ರ ವಿತರಣೆಗೆ ವಾರ್ಷಿಕ ಮತ್ತು ಮಾಸಿಕ ಗುರಿಗಳನ್ನು ನೀಡಬಹುದು.**

11. **1994ರಿಂದ ನಗರ ಸ್ಥಳೀಯ ಸಂಸ್ಥೆಗಳಿಂದ ಕೊಳಗೇರಿ ಅಭಿವೃದ್ಧಿ ಸುಧಾರಣಾ ಸೆಸ್ ಸಂಗ್ರಹಿಸಲಾಗುತ್ತಿದೆ. ಅಂದಿನಿಂದ ದರಗಳನ್ನು ಪರಿಷ್ಕರಿಸಲಾಗಿಲ್ಲ. ಕೊಳಗೇರಿ ಅಭಿವೃದ್ಧಿಯ ಅಗತ್ಯತೆಗೆ ಹೋಲಿಸಿದರೆ ಇದು ಅತ್ಯಂತ ಕಡಿಮೆಯಾಗಿದೆ. ಆದ್ದರಿಂದ ವಸತಿ ಇಲಾಖೆಯು ಕರ್ನಾಟಕ ಕೊಳಗೇರಿ ಪ್ರದೇಶಗಳ (ಸುಧಾರಣೆ ಮತ್ತು ತೆರವು) ಕಾಯ್ದೆ 1973ಕ್ಕೆ ತಿದ್ದುಪಡಿ ತಂದು ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ 1965ರ ಕಲಂ 30ರಂತೆಯೇ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳು ವಿಧಿಸುವ ಆಸ್ತಿತೆರಿಗೆ ಮತ್ತು ಇತರ ತೆರಿಗೆಗಳ ಶೇಕಡಾವಾರು ಪ್ರಮಾಣದಲ್ಲಿ ಕೊಳಗೇರಿ ಅಭಿವೃದ್ಧಿ ಸೆಸ್‌ನ್ನು ಸಂಗ್ರಹಿಸಲು ಅವಕಾಶ ಕಲ್ಪಿಸಲು ಶಿಫಾರಸು ಮಾಡಲಾಗಿದೆ.**

12. **ವಸತಿ ಇಲಾಖೆಯು ಮಂಡಳಿಗೆ ಸೇರಿದ ಖಾಲಿ ಭೂಮಿಯನ್ನು ಇ–ಹರಾಜು ತಂತ್ರಾಂಶದ ಮೂಲಕ ಮಾತ್ರ ಹರಾಜು ಮಾಡಿ ವಿಲೇವಾರಿ ಮಾಡಬೇಕು ಎಂಬುದನ್ನು ಪರಿಗಣಿಸಿ ಸೂಚನೆಗಳನ್ನು ನೀಡಬಹುದು.**

## IV.ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

13. ಮಾನವ–ವನ್ಯಪ್ರಾಣಿ ಸಂಘರ್ಷದ ಸಂತ್ರಸ್ತರಿಗೆ ಎಕ್ಸ್–ಗ್ರೇಷಿಯಾ ನೀಡುವಲ್ಲಿ ಇಲಾಖೆ ತ್ವರಿತವಾಗಿ ಸ್ಪಂದಿಸಬೇಕು. ಎಕ್ಸ್–ಗ್ರೇಷಿಯಾವನ್ನು ತ್ವರಿತವಾಗಿ ಪಾವತಿಸುವ ಹಿತದೃಷ್ಟಿಯಿಂದ **ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಎಕ್ಸ್–ಗ್ರೇಷಿಯಾ ಮಂಜೂರು ಮಾಡುವ ವಾರ್ಷಿಕ ಮಿತಿಯನ್ನು** ವಾರ್ಷಿಕ **ರೂ 5 ಲಕ್ಷದವರೆಗೆ ಹೆಚ್ಚಿಸಲು ಶಿಫಾರಸು ಮಾಡಲಾಗಿದೆ. ವಲಯ ಅರಣ್ಯಾಧಿಕಾರಿಗಳಿಗೆ (ಆರ್‌ಎಫ್‌ಒ) ವಾರ್ಷಿಕ ಗರಿಷ್ಠ ರೂ 2 ಲಕ್ಷದ ಮಿತಿಗೆ ಒಳಪಟ್ಟು ಪ್ರತಿ ಪ್ರಕರಣಕ್ಕೆ ರೂ 15,000 ಗಳವರೆಗೆ ಎಕ್ಸ್–ಗ್ರೇಷಿಯಾವನ್ನು ಮಂಜೂರು ಮಾಡುವ ಅಧಿಕಾರವನ್ನು ಪ್ರತ್ಯಾಯೋಜಿಸಲು ಶಿಫಾರಸು ಮಾಡಲಾಗಿದೆ. ಎಕ್ಸ್–ಗ್ರೇಷಿಯಾವನ್ನು ಮಂಜೂರು ಮಾಡುವ ಅಧಿಕೃತ ಜ್ಞಾಪನಾ ಪತ್ರವನ್ನು ಹೊರಡಿಸುವ ಅಧಿಕಾರವನ್ನು ಆರ್‌ಎಫ್‌ಒಗಳಿಗೆ ನೀಡಬಹುದು.**

14. **ಗ್ರಾಮ ಅರಣ್ಯ ಸಮಿತಿಗಳು ಅನೇಕ ವರ್ಷಗಳಿಂದ ಬಳಕೆಯಾಗದೆ ಉಳಿದಿರುವ ಹಣವನ್ನು ಹೊಂದಿವೆ. ಸದರಿ ಹಣವು ಬಳಕೆಯಾಗದಿರಲು ಅನುಮೋದನೆ ಪಡೆಯುವ ಅಸಮರ್ಪಕ ಕಾರ್ಯವಿಧಾನವು ಕಾರಣವಾಗಿರಬಹುದು. ಈ ಪ್ರಕ್ರಿಯೆಯನ್ನು ಸರಳಗೊಳಿಸುವ ಸಲುವಾಗಿ ಗ್ರಾಮ ಅರಣ್ಯ ಸಮಿತಿಗಳ 10 ವರ್ಷಗಳ ನಿರ್ವಹಣಾ ಯೋಜನೆಯ ಅನುಮೋದನೆಯನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ /ಅರಣ್ಯ ಸಂರಕ್ಷಣಾಧಿಕಾರಿ ಬದಲಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಡಿಸಿಎಫ್) ಮಾಡಬಹುದು ಎಂದು ಶಿಫಾರಸು ಮಾಡಲಾಗಿದೆ. 10 ವರ್ಷಗಳ ಯೋಜನೆಯ ಅನುಮೋದನೆಯ ನಂತರ ವಾರ್ಷಿಕ ಕಾರ್ಯಾಚರಣೆಯ ಯೋಜನೆಯ ಅನುಮೋದನೆಯನ್ನು ಎಸಿಎಫ್ ಮಾಡಬಹುದು ಮತ್ತು ಆರ್‌ಎಫ್‌ಒರವರು ಅಂದಾಜುಗಳ ಅನುಮೋದನೆ ಪಡೆಯಬಹುದು, ಟೆಂಡರ್ ಕರೆಯುವುದು ಮತ್ತು ಅನುಮೋದಿಸುವುದು, ಕಾರ್ಯಾದೇಶ ವಿತರಣೆ ಮತ್ತು ಬಿಲ್ಲುಗಳ ಪಾವತಿಯನ್ನು ಮಾಡಬಹುದು.**

15. ಸುಮಾರು ಒಂದು ಲಕ್ಷ ಅರಣ್ಯ ಅಪರಾಧ ಪ್ರಕರಣಗಳು ಬಾಕಿ ಉಳಿದಿವೆ. ಈ ವಿಳಂಬವು ಗೊತ್ತುಪಡಿಸಿದ ದಂಡ ವಿಧಿಸುವ ಉದ್ದೇಶವನ್ನು ವಿಫಲಗೊಳಿಸುವುದಲ್ಲದೇ ಪದೇ ಪದೇ ಉಲ್ಲಂಘಿಸುವವರಿಗೆ ಮುಕ್ತವಾಗಿ ಓಡಾಡಲು ಅನುವು ಮಾಡಿಕೊಡುತ್ತದೆ. ಪ್ರತಿಬಂಧಕವಾಗಿ ಕಾರ್ಯನಿರ್ವಹಿಸುವ ಸಲುವಾಗಿ ಅಧಿಕಾರವನ್ನು ಪ್ರತ್ಯಾಯೋಜಿಸಿ ಕಾಂಪೌಂಡಿಂಗ್ ಮೊತ್ತವನ್ನು ಹೆಚ್ಚಿಸುವ ಮೂಲಕ ಅಪರಾಧಗಳ ಕಾಂಪೌಂಡಿಗ್ ಅಧಿಕಾರವನ್ನು ಹೆಚ್ಚು ವ್ಯಾಪಕವಾಗಿ ಬಳಸಬಹುದು. **ಅರಣ್ಯ ಇಲಾಖೆಯು ಉಪವಲಯ ಅರಣ್ಯಾಧಿಕಾರಿಗಳಿಗೆ ಅಪರಾಧಗಳನ್ನು ಕಾಂಪೌಂಡ್ ಮಾಡುವ ಅಧಿಕಾರ ನೀಡಲು ಕರ್ನಾಟಕ ಅರಣ್ಯ ಕಾಯ್ದೆಯ ಕಲಂ 79ಕ್ಕೆ ತಿದ್ದುಪಡಿ ತರಲು ಪ್ರಸ್ತಾಪಿಸಬಹುದು** ಎಂದು ಶಿಫಾರಸ್ಸು ಮಾಡಲಾಗಿದೆ. ಕಾಂಪೌಂಡ್ ಮಾಡಬಹುದಾದ ಅಪರಾಧಗಳಿಗೆ 1981 ರಲ್ಲಿ ಐವತ್ತು ಸಾವಿರ ರೂಪಾಯಿಗಳ ಮಿತಿಯನ್ನು ನಿಗದಿಪಡಿಸಲಾಗಿತ್ತು. **ಆದ್ದರಿಂದ ಹಣದುಬ್ಬರ ಸೂಚ್ಯಂಕದ ಪ್ರಕಾರ ಕಂಪೌಂಡಿಂಗ್ ಮಿತಿಯನ್ನು ರೂ 10 ಲಕ್ಷದವರೆಗೆ ಹೆಚ್ಚಿಸಲು ಶಿಫಾರಸು ಮಾಡಲಾಗಿದೆ.**

16. ಶ್ರೀಗಂಧ ಮತ್ತು ತೇಗದ ಮರಗಳನ್ನು ಬೆಳೆಸಲು ರೈತರನ್ನು ಉತ್ತೇಜಿಸುವ ಉದ್ದೇಶದಿಂದ ಸರ್ಕಾರವು ಇತ್ತೀಚಿನ ವರ್ಷಗಳಲ್ಲಿ ಖಾಸಗಿ ಭೂಮಿಯಲ್ಲಿ ಬೆಳೆದ ಶ್ರೀಗಂಧ ಮತ್ತು ತೇಗದ ಮರವನ್ನು ಕಡಿಯುವ, ಸಾಗಿಸುವ ಮತ್ತು ಮಾರಾಟ ಮಾಡುವ ನಿಯಮಗಳನ್ನು ಸಡಿಲಗೊಳಿಸಿದೆ. ಆದಾಗ್ಯೂ, ಬೀಟೆಮರಗಳಿಗೆ ಸಂಬಂಧಿಸಿದ ನಿಯಮಗಳನ್ನು ಇಲ್ಲಿಯವರೆಗೆ ಸಡಲಿಸಿಲ್ಲ. **ಬೀಟೆಮರಗಳನ್ನು ಕಡಿಯಲು ಮತ್ತು ಸಾಗಿಸಲು ವಿಶೇಷ ನಿಯಮಗಳನ್ನು ಹೊಂದುವ ಅಗತ್ಯವಿಲ್ಲ. ಇತರ ಮರಗಳಿಗೆ ಸಂಬಂಧಿಸಿದ ನಿಯಮಗಳಂತೆ ಬೀಟೆಮರಗಳಿಗೂ ಸಹ ಸಡಿಲಿಸಬಹುದು.**

17. ಕರಾವಳಿ ನಿಯಂತ್ರಣ ವಲಯ (ಸಿಆರ್‌ಝಡ್)–3ರ ನಿಯಮಗಳ ಪ್ರಕಾರ ಕರಾವಳಿಯ 200 ಮೀಟರ್‌ನಿಂದ 500 ಮೀಟರ್ ವ್ಯಾಪ್ತಿಯಲ್ಲಿ ಮನೆಗಳನ್ನು ನಿರ್ಮಿಸುವವರು ಜಿಲ್ಲಾಧಿಕಾರಿ ಅಧ್ಯಕ್ಷತೆಯ ಜಿಲ್ಲಾ ಕರಾವಳಿ ನಿರ್ವಹಣಾ ಸಮಿತಿಯಿಂದ ಅನುಮತಿ ಪಡೆಯಬೇಕು. ಜಿಲ್ಲಾಧಿಕಾರಿಯವರು ವಿವಿಧ ರೀತಿಯ ಕೆಲಸಗಳ ಅಪಾರ ಕೆಲಸದ ಹೊರೆಯನ್ನು ಹೊಂದಿರುತ್ತಾರೆ. ಜಿಲ್ಲಾಧಿಕಾರಿಯವರಿಗೆ ಡಿಸಿಎಂಸಿಯ ಸಭೆಗಳನ್ನು ನಿಯಮಿತವಾಗಿ ನಡೆಸಲು ಸಾಧ್ಯವಾಗದಿರಬಹುದು. **ಆದ್ದರಿಂದ, ಸಂಬಂಧಪಟ್ಟ ಡಿಸಿಎಫ್‌ಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲು ಇಲಾಖೆ ಪರಿಗಣಿಸಬಹುದು ಎಂದು ಸಲಹೆ ನೀಡಲಾಗಿದೆ.**

18. ಹಲವು ದಶಕಗಳಿಂದ ಸಾವಿರಾರು ಅರಣ್ಯ ಅಪರಾಧ ಪ್ರಕರಣಗಳು ಬಾಕಿ ಉಳಿದಿವೆ. ಅಂತಹ ಪ್ರಕರಣಗಳಲ್ಲಿ ವಶಪಡಿಸಿಕೊಂಡ ಮರಗಳನ್ನು ನ್ಯಾಯಾಲಯದ ಆದೇಶಗಳನ್ನು ನಿರೀಕ್ಷಿಸಿ ಟಿಂಬರ್ ಡಿಪೋಗಳಲ್ಲಿ ಸಂಗ್ರಹಿಸಲಾಗುತ್ತದೆ. ಇಂತಹ ದೀರ್ಘ ವಿಳಂಬದಿಂದಾಗಿ ಮರದ ಗುಣಮಟ್ಟವು ಹದಗೆಡುವುದಲ್ಲದೇ ನಿಷ್ಪ್ರಯೋಜಕವಾಗಬಹುದು. ಅಂತಹ ಸಂದರ್ಭಗಳಲ್ಲಿ ಅರ್ಜಿದಾರ ಮತ್ತು ಸರ್ಕಾರ ನಷ್ಟವನ್ನು ಅನುಭವಿಸುತ್ತವೆ. **ಆದ್ದರಿಂದ, ಅರಣ್ಯ ಇಲಾಖೆಯು ಸೆಕ್ಷನ್ 62 ಬಿ ತಿದ್ದುಪಡಿಗೆ ಪ್ರಸ್ತಾಪಿಸಲು ಶಿಫಾರಸು ಮಾಡಲಾಗಿದೆ. ಇದರಿಂದ ಸಂಬಂಧಪಟ್ಟ ಆರ್‌ಎಫ್‌ಒಗಳಿಗೆ ನ್ಯಾಯಾಲಯದಲ್ಲಿ ಆರೋಪ ಪಟ್ಟಿಯನ್ನು ಸಲ್ಲಿಸಿದ ತಕ್ಷಣ, ವಶಪಡಿಸಿಕೊಂಡ ವಸ್ತುಗಳನ್ನು ಇ–ಹರಾಜು ಮಾಡಲು ಮತ್ತು ಪ್ರಕರಣದ ಅಂತಿಮ ವಿಲೇವಾರಿಯವರೆಗೆ ಹರಾಜಿನ ಆದಾಯವನ್ನು ಅದೇ ನ್ಯಾಯಾಲಯದಲ್ಲಿ ಠೇವಣಿ ಇಡಲು ಅಧಿಕಾರ ನೀಡಬಹುದಾಗಿದೆ.**

19. **ಅರಣ್ಯ ಇಲಾಖೆಯ ಆರ್‌ಆರ್‌ಟಿಗಳು, ಎಪಿಸಿಗಳು, ಲೂಟಿವಿರೋಧಿ ಶಿಬಿರಗಳು, ಅರಣ್ಯ ಸಂರಕ್ಷಣಾ ಶಿಬಿರಗಳು, ಆನೆ ಕಾರ್ಯಪಡೆ ಮತ್ತು ಅಂತಹ ಇತರ ಜೀವ ಬೆದರಿಕೆ ಇರುವಂತಹ ಕೆಲಸಗಳಲ್ಲಿ ಕೆಲಸ ಮಾಡುವ ಹೊರಗುತ್ತಿಗೆ ಸಿಬ್ಬಂದಿಗಳಿಗೆ ಸರ್ಕಾರಿ ವೆಚ್ಚದಲ್ಲಿ ಮರಣ ಮತ್ತು ಅಂಗವೈಕಲ್ಯ ವಿಮಾರಕ್ಷಣೆಯನ್ನು ವಿಸ್ತರಿಸಲು ಪ್ರಸ್ತಾವನೆಯನ್ನು ಪ್ರಸ್ತಾಪಿಸಲು ಶಿಫಾರಸು ಮಾಡಲಾಗಿದೆ.**

20. **ಹೆಚ್ಚು ಕೆಲಸ ಹೊಂದಿರದ ಕಡಿಮೆ ಅರಣ್ಯ ಪ್ರದೇಶವನ್ನು ಹೊಂದಿರುವ ಜಿಲ್ಲೆಗಳ ಪ್ರಾದೇಶಿಕ ವಿಭಾಗವನ್ನು ಹೆಚ್ಚು ಕೆಲಸ ಇರುವ ಮಲೆನಾಡು ಜಿಲ್ಲೆಗಳ ಸಾಮಾಜಿಕ ಅರಣ್ಯ (ಎಸ್‌ಎಫ್) ವಿಭಾಗದೊಂದಿಗೆ ವಿಲೀನಗೊಳಿಸಬಹುದು ಎಂದು ಶಿಫಾರಸು ಮಾಡಲಾಗಿದೆ.**

21. **ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ, ಎಲ್ಲಾ ಹಸಿರು ವರ್ಗದ ಕೈಗಾರಿಕೆಗಳು, ಸಣ್ಣ ಪ್ರಮಾಣದ ಕಿತ್ತಳೆ ಮತ್ತು ಸೂಕ್ಷ್ಮ ಕೆಂಪುವರ್ಗದ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಮಂಡಳಿಯು ನಿರ್ವಹಿಸುವ ಎರಡು ಕಾಯ್ದೆಗಳು ಮತ್ತು ನಾಲ್ಕು ನಿಯಮಗಳ ಅಡಿಯಲ್ಲಿ ಒಪ್ಪಿಗೆ, ಅಧಿಕಾರ ಮತ್ತು ನೋಂದಣಿ ನೀಡುವ ಅಧಿಕಾರವನ್ನು ಪ್ರಾದೇಶಿಕ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಬಹುದು. ಉದ್ಯಮವು ಎಲ್ಲಾ 6 ಕಾಯ್ದೆಗಳು/ನಿಯಮಗಳ ಅಡಿಯಲ್ಲಿ ಸಮ್ಮತಿ/ಅಧಿಕಾರ/ನೋಂದಣಿಯನ್ನು ಪ್ರಾದೇಶಿಕ ಅಧಿಕಾರಿಂದ ಒಂದೇ ಆದೇಶದಲ್ಲಿ ಪಡೆಯಲು ಸಾಧ್ಯವಾಗುತ್ತದೆ.**

## V. ಜಲಸಂಪನ್ಮೂಲ ಇಲಾಖೆ

22. 2019 ರಲ್ಲಿ ಹೊರಡಿಸಲಾದ ಕೈಗಾರಿಕಾ ಬಳಕೆಗಾಗಿ ಪರಿಷ್ಕೃತ ನೀರಿನ ದರಗಳನ್ನು ಸಂಬಂಧಿತ ನಿಯಮಗಳನ್ನು ತಿದ್ದುಪಡಿ ಮಾಡದ ಕಾರಣ ಮಾನ್ಯ ಉಚ್ಚ ನ್ಯಾಯಾಲಯವು ರದ್ದುಗೊಳಿಸಿದೆ. ಕೈಗಾರಿಕಾ ಬಳಕೆಯ ಪರಿಷ್ಕೃತ ನೀರಿನ ದರವನ್ನು ನದಿ ನೀರಿನ ಬಳಕೆಗೆ ಪ್ರತಿ ಎಂಸಿಎಫ್‌ಟಿಗೆ ರೂ 1.20 ಲಕ್ಷಗಳು, ಕಾಲುವೆ ನೀರಿನ ಬಳಕೆಗೆ ರೂ 2.40ಲಕ್ಷಗಳು. **ಈ ದರಗಳೊಂದಿಗೆ ನಿಯಮಗಳನ್ನು ಅಧಿಸೂಚಿಸಬಹುದು. ದರಗಳನ್ನು ಪರಿಷ್ಕರಿಸುವಾಗ, ಹಣದುಬ್ಬರ** ಮತ್ತು ನೆರೆಯ ರಾಜ್ಯಗಳಲ್ಲಿ ಕೈಗಾರಿಕಾ ಬಳಕೆಗಾಗಿ ಹೆಚ್ಚಿನ ನೀರಿನ ದರಗಳನ್ನು ಗಣನೆಗೆ ತೆಗೆದುಕೊಂಡು ಪ್ರತಿವರ್ಷ 5% ದರದಲ್ಲಿ ದರವನ್ನು ಹೆಚ್ಚಿಸಲು ಜಲಸಂಪನ್ಮೂಲ ಇಲಾಖೆಯು ನಿಯಮಗಳಲ್ಲಿ ನಿಬಂಧನೆಯನ್ನು ಸೇರಿಸಬಹುದು.

23. ಜಲಮಂಡಳಿ ಉಪವಿಭಾಗಗಳು ಕಾಲುವೆ ಕಟ್ಟೆಗಳಲ್ಲಿನ ಬಿರುಕುಗಳನ್ನು ತಾತ್ಕಾಲಿಕವಾಗಿ ಸರಿಪಡಿಸುವುದು, ಬಿದ್ದ ಮರಗಳನ್ನು ತೆಗೆದುಹಾಕುವುದು, ಇಲಿ–ರಂಧ್ರಗಳನ್ನು ಮುಚ್ಚುವುದು ಮುಂತಾದ ತುರ್ತು ಕಾಮಗಾರಿಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿವೆ. ಆದಾಗ್ಯೂ, ನಿಗಮದ ಕೇಂದ್ರಕಚೇರಿಯಿಂದ ಪೂರ್ವಾನುಮತಿ ಪಡೆಯದೆ ಅಂತಹ ಕಾಮಗಾರಿಗಳನ್ನು ಮಾಡಲು ಪ್ರಸ್ತುತ ಯಾವುದೇ ಅವಕಾಶವಿಲ್ಲ. **ಕೆಟಿಪಿಪಿ ಕಾಯ್ದೆಯ ಸೆಕ್ಷನ್ 4 ಎ ಅಡಿಯಲ್ಲಿ ಪೂರ್ವಾನುಮತಿ ಪಡೆಯದೆ ನಿರ್ದಿಷ್ಟ ತುರ್ತು ಕಾಮಗಾರಿಗಳನ್ನು ಕೈಗೊಳ್ಳಲು ಕಾರ್ಯನಿರ್ವಾಹಕ ಎಂಜಿನಿಯರ್‌ಗಳಿಗೆ ರೂ 5 ಲಕ್ಷಗಳ ಆವರ್ತ ನಿಧಿಯನ್ನು ಒದಗಿಸುವಂತೆ ಸಲಹೆ ನೀಡಲಾಗಿದೆ.**

24. ಆಯುಕ್ತರು, ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಹುದ್ದೆಯನ್ನು ಸಾಮಾನ್ಯವಾಗಿ ಅಧಿಕಾರಿಗಳು ಸಮವರ್ತಿ ಪ್ರಭಾರಿಯಾಗಿ ಹೊಂದಿರುತ್ತಾರೆ. ಬಾಗಲಕೋಟೆಗೆ ಭೇಟಿ ನೀಡಿ ಕಡತಗಳನ್ನು ವಿಲೆಗೊಳಿಸಲು ಅವರಿಗೆ ಹೆಚ್ಚು ಸಮಯವಿಲ್ಲದಿರಬಹುದು ಆದ್ದರಿಂದ ಭೂಸ್ವಾಧೀನ ಕಡತಗಳನ್ನು ಅನುಮೋದಿಸುವಲ್ಲಿ ವಿಳಂಬವಾಗಬಹುದು.ಇದು ಯೋಜನೆಯ ಅನುಷ್ಠಾನವನ್ನು ಮತ್ತಷ್ಟು ವಿಳಂಬಗೊಳಿಸುತ್ತದೆ. **ಆದ್ದರಿಂದ ಭೂಸ್ವಾಧೀನ ಪ್ರಕರಣಗಳನ್ನು ಅನುಮೋದಿಸುವ ಅಧಿಕಾರವನ್ನು ಬಾಗಲಕೋಟೆ ಜಿಲ್ಲೆ ಹೊರತುಪಡಿಸಿ ಇತರ ಜಿಲ್ಲೆಗಳ ಸಂಬಂಧಿತ ಜಿಲ್ಲಾಧಿಕಾರಿಗಳಿಗೆ ಪ್ರತ್ಯಾಯೋಜಿಸಬೇಕು ಎಂದು ಶಿಫಾರಸು ಮಾಡಲಾಗಿದೆ.**

25. **ಜಲಸಂಪನ್ಮೂಲ ಇಲಾಖೆಯು ಪೂರ್ಣಗೊಂಡ ಯೋಜನಾಪ್ರದೇಶಗಳಲ್ಲಿನ ಕ್ಷೇತ್ರ ನೀರಾವರಿ ಕಾಲುವೆ ರಚನೆ ಹಾಗೂ ನಿರ್ವಹಣೆ ಮತ್ತು ನೀರು ಬಳಕೆದಾರರ ಸಹಕಾರ ಸಂಘಗಳ ಜವಾಬ್ದಾರಿಯನ್ನು ನಿಗಮಗಳ ವ್ಯಾಪ್ತಿಗೆ ವರ್ಗಾಯಿಸಲು ಪರಿಗಣಿಸಬಹುದು ಎಂದು ಶಿಫಾರಸು ಮಾಡಲಾಗಿದೆ. ನೀರು ಬಳಕೆದಾರರ ಸಹಕಾರ ಸಂಘಗಳೊಂದಿಗೆ ವ್ಯವಹರಿಸುವ,ಅವುಗಳನ್ನು ರಚಿಸುವ ಮತ್ತು ಪುನರುಜ್ಜೀವನಗೊಳಿಸುವ ಜವಾಬ್ದಾರಿಯನ್ನು**

ನಿಗಮಗಳ ನಿರ್ವಹಣಾ ಉಪವಿಭಾಗಗಳಿಗೆ ವಹಿಸಬಹುದು. ನೀರು ಬಳಕೆದಾರರ ಸಹಕಾರ ಸಂಘಗಳ ರಚನೆ ಮತ್ತು ಅವುಗಳ ಪುನರುಜ್ಜೀವನಕ್ಕಾಗಿ ನಿಗಮಗಳಿಗೆ ವಾರ್ಷಿಕ ಗುರಿಯನ್ನು ನೀಡಬಹುದು.

**26. ಎಲ್ಲಾ ಸಕ್ರಿಯ ನೀರು ಬಳಕೆದಾರರ ಸಹಕಾರ ಸಂಘಗಳಿಗೆ ತಲಾ ರೂ 2 ಲಕ್ಷಗಳ ವಾರ್ಷಿಕ ಅನುದಾನವನ್ನು ನೀಡಲು ಶಿಫಾರಸು ಮಾಡಲಾಗಿದೆ. ನಿಗಮಗಳಲ್ಲಿ ಹೆಚ್ಚಿನ ಬಜೆಟ್ ಹಂಚಿಕೆ ಲಭ್ಯವಿರುವುದರಿಂದ ಹಣವನ್ನು ಕಾಡಾಗಳ ಬದಲು ನಿಗಮಗಳ ಮೂಲಕ ಕೊಡಬಹುದು.**

27. ನಿಗಮಗಳು ತಮ್ಮ ಕಾರ್ಯಾಚರಣೆಗಳಿಗಾಗಿ ಸಮಗ್ರ ನಿರ್ವಹಣಾ ಮಾಹಿತಿ ವ್ಯವಸ್ಥೆ (ಎಂಐಎಸ್) ಮತ್ತು ಉದ್ಯಮ ಸಂಪನ್ಮೂಲ ಯೋಜನೆ (ಇಆರ್‌ಪಿ) ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಬೇಕು. ಇದನ್ನು ಇಪ್ರೊಕ್ಯೂರ್ಮೆಂಟ್, ಇ-ಆಫೀಸ್, ಎಚ್‌ಆರ್‌ಎಂಎಸ್, ಅವಲೋಕನಾ, ಖಜಾನೆ-2 ಇತ್ಯಾದಿಗಳೊಂದಿಗೆ ಸಂಯೋಜಿಸಬೇಕು. **ವೆಚ್ಚ ಹಂಚಿಕೆ ಆಧಾರದ ಮೇಲೆ ಎಲ್ಲಾ ನಿಗಮಗಳ ಬಳಕೆಗಾಗಿ ಇಆರ್‌ಪಿ ಮತ್ತು ಎಂಐಎಸ್‌ಅನ್ನು ಅಭಿವೃದ್ಧಿಪಡಿಸುವ ಕಾರ್ಯವನ್ನು ಜಲಸಂಪನ್ಮೂಲ ಇಲಾಖೆಯು ಇ-ಆಡಳಿತ ಇಲಾಖೆಯ ಸ್ಮಾರ್ಟ್‌ಆಡಳಿತ ಕೇಂದ್ರ(ಸಿಎಸ್‌ಜಿ)ಕ್ಕೆ ವಹಿಸಬಹುದು.**

**28. ಹೊಸ ಯೋಜನೆಗಳ ಅನುಷ್ಠಾನಕ್ಕಾಗಿ ಪ್ರತಿ ನಿಗಮಗಳ ಅಡಿಯಲ್ಲಿ ಉಪವಿಭಾಗ ಮತ್ತು ಯೋಜನಾ ಕಚೇರಿಗಳನ್ನು ಸ್ಥಾಪಿಸಲಾಗಿದೆ. ಯೋಜನಾ ಕಾರ್ಯಗಳು ಪೂರ್ಣಗೊಂಡ ನಂತರ, ಯೋಜನೆಗಳ ನಿರ್ವಹಣೆಯನ್ನು ಉಪವಿಭಾಗಗಳಿಗೆ ವರ್ಗಾಯಿಸಲಾಗುತ್ತದೆ. ಆದ್ದರಿಂದ ನಿರ್ವಹಣಾ ಕಾರ್ಯಗಳಿಗೆ ಕಡಿಮೆ ಸಂಖ್ಯೆಯ ಉಪವಿಭಾಗಗಳು ಬೇಕಾಗುತ್ತವೆ. ಇದಲ್ಲದೆ, ಅವಲೋಕನದ ಆಧಾರದ ಮೇಲೆ, ಪ್ರತಿ ನಿರ್ವಹಣಾ ಉಪವಿಭಾಗಗಳಲ್ಲಿನ ಸಿಬ್ಬಂದಿ ಮಾದರಿ ಕೆಲಸದ ಹೊರೆಯ ಯಾವುದೇ ನಿರ್ದಿಷ್ಟ, ವಸ್ತುನಿಷ್ಠ ಮೌಲ್ಯಮಾಪನವನ್ನು ಆಧರಿಸಿಲ್ಲ. ಆದ್ದರಿಂದ ನಿಯತಾಂಕ ಆಧಾರಿತ ಕೆಲಸದ ಹೊರೆಯ ಮೌಲ್ಯಮಾಪನದ ಆಧಾರದ ಮೇಲೆ ಉಪವಿಭಾಗಗಳ ಸಂಖ್ಯೆ ಮತ್ತು ಎಂಜಿನಿಯರಿಂಗ್ ಸಿಬ್ಬಂದಿಯ ಸಂಖ್ಯೆಯನ್ನು ಪುನರ್‌ವ್ಯವಸ್ಥೆಗೊಳಿಸಬಹುದು.**

## VI. ಸಣ್ಣನೀರಾವರಿ ಇಲಾಖೆ

29. ಸಣ್ಣ ನೀರಾವರಿ ಇಲಾಖೆಯು ಕೆರೆ ಸಂಜೀವಿನಿ ಕಾರ್ಯಕ್ರಮವನ್ನು ಗುತ್ತಿಗೆದಾರರ ಮೂಲಕ ಅನುಷ್ಠಾನಗೊಳಿಸಿದರೆ, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರವು ಕೆರೆ ಬಳಕೆದಾರರ ಸಂಘಗಳ ಮೂಲಕ ಅನುಷ್ಠಾನಗೊಳಿಸುತ್ತದೆ. ಉತ್ತಮ ಗುಣಮಟ್ಟದ ಕೆಲಸ ಮತ್ತು ಸ್ಥಳೀಯ ಸಹಭಾಗಿತ್ವದ ಹಿತದೃಷ್ಟಿಯಿಂದ, **ಸಣ್ಣ ನೀರಾವರಿ ಇಲಾಖೆಯು ಸಂಬಂಧಿತ ಕೆರೆ ಬಳಕೆದಾರರ ಸಂಘಗಳ ಮೂಲಕ ಕೆರೆಸಂಜೀವಿನಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡಬಹುದು.**

**30. ಇಲಾಖೆಯು ಏತನೀರಾವರಿ ಮತ್ತು ಕೆರೆ ತುಂಬಿಸುವ ಯೋಜನೆಗಳಲ್ಲಿನ ಎಲ್ಲಾ ಹಳೆಯ ಪಂಪ್‌ಗಳು ಮತ್ತು ಮೋಟರ್‌ಗಳ ದಕ್ಷತೆಯನ್ನು ಅಳೆಯಲು ಇಂಧನ ಲೆಕ್ಕಪರಿಶೋಧನೆ ಮಾಡಬೇಕು. ಎಲ್ಲಾ ಉಪವಿಭಾಗಗಳಿಗೆ ಇಲಾಖೆಯು ಜಾರಿಗೆ ತರಬೇಕಾದ ಇಂಧನ ಉಳಿತಾಯ ಕ್ರಮಗಳ ಬಗ್ಗೆ ಮಾರ್ಗಸೂಚಿಗಳನ್ನು ನೀಡಬೇಕು. ನಿಖರವಾದ ಮೀಟರಿಂಗ್‌ಅನ್ನು ಖಚಿತಪಡಿಸಿಕೊಳ್ಳಲು ವಿದ್ಯುತ್ ಮೀಟರ್‌ಗಳ ಮಾಪನಾಂಕ ನಿರ್ಣಯವನ್ನು ನಿಯಮಿತವಾಗಿ ಮಾಡಬೇಕು. ಅಗತ್ಯವಿದ್ದರೆ, ಸ್ಮಾರ್ಟ್ ಸಿಟಿ ನಿಗಮಗಳು ಅಸಮರ್ಥ ಬಲ್ಬ್‌ಗಳು ಮತ್ತು ಟ್ಯೂಬ್‌ಗಳನ್ನು ಬದಲಾಯಿಸಿ ಎಲ್‌ಇಡಿ ಬೀದಿದೀಪಗಳನ್ನು ಹಾಕಿದಂತೆ,ಅಸಮರ್ಥ ಪಂಪ್‌ಗಳು ಮತ್ತು ಮೋಟರ್‌ಗಳನ್ನು ಬದಲಾಯಿಸುವ ಯೋಜನೆಗಳನ್ನು ಟೆಂಡರ್ ಕರೆಯುವ ಮೂಲಕ ಮಾಡಬಹುದು.**

## VII. ಲೋಕೋಪಯೋಗಿ ಇಲಾಖೆ

**31. ಹಣ ಪೋಲಾಗುವುದನ್ನು ತಡೆಗಟ್ಟಲು, ಆರ್ಥಿಕ ಇಲಾಖೆಯು ಎಲ್ಲಾ ಪಿಡಬ್ಲ್ಯೂಡಿ ಕಚೇರಿಗಳು ಮತ್ತು ಅವುಗಳ ಲೆಕ್ಕಾಧಿಕಾರಿಗಳಿಗೆ ಸಂಬಂಧಿಸಿದ ಪ್ರತಿ ರಸ್ತೆ ಕಾಮಗಾರಿಗಳಿಗೆ ಬಿಲ್ಲುಗಳನ್ನು ರಸ್ತೆ ಮಾಹಿತಿ ವ್ಯವಸ್ಥೆ (ಆರ್‌ಐಎಸ್)ಯ ಪ್ರತಿಯನ್ನು ಪಡೆದು, ಪರಿಶೀಲಿಸಿ ಆನ್‌ಲೈನ್ ರಸ್ತೆ ವಿವರವನ್ನು ನವೀಕರಿಸಿದ್ದರೆ ಮಾತ್ರ ಪಾವತಿ ಮಾಡಬೇಕು ಎಂದು ಆದೇಶ ಹೊರಡಿಸಲು ಶಿಫಾರಸು ಮಾಡಲಾಗಿದೆ.**

32. ಇಲಾಖೆಯು ಕಟ್ಟಡ ಮಾಹಿತಿವ್ಯ ವಸ್ಥೆಯನ್ನು (ಬಿಐಎಸ್) ಅಭಿವೃದ್ಧಿಪಡಿಸಿದೆ ಆದರೆ ಬಳಸಲಾಗುತ್ತಿಲ್ಲ. ರಸ್ತೆ ಮಾಹಿತಿ ವ್ಯವಸ್ಥೆಯಂತೆಯೇ, ಕೆಲಸದ ಬಿಲ್ಲುಗಳ ಪಾವತಿಯನ್ನು ಬಿಐಎಸ್ ಪರಿಶೀಲನೆಗೆ ಲಿಂಕ್ ಮಾಡದ ಹೊರತು, ಅದನ್ನು ಬಳಸುವ ಸಾಧ್ಯತೆಯಿಲ್ಲ. ಆದ್ದರಿಂದ, ಸಂಬಂಧಿತ ಬಿಐಎಸ್ ಪ್ರತಿಯನ್ನು ಪಡೆದು, ಪರಿಶೀಲಿಸಿ ಆನ್‌ಲೈನ್ ಕಟ್ಟಡ ವಿವರವನ್ನು ನವೀಕರಿಸಿದರೆ ಮಾತ್ರ ಕಟ್ಟಡ ಕಾಮಗಾರಿಗಳಿಗೆ ಬಿಲ್ಲುಗಳನ್ನು ಪಾವತಿ ಮಾಡಲು ಆರ್ಥಿಕ ಇಲಾಖೆಯು ಲೋಕೋಪಯೋಗಿಯ ಎಲ್ಲಾ ಕಚೇರಿಗಳು ಮತ್ತು ಅವುಗಳ ಲೆಕ್ಕಾಧಿಕಾರಿಗಳಿಗೆ ಆದೇಶ ಹೊರಡಿಸಲು ಶಿಫಾರಸು ಮಾಡಲಾಗಿದೆ.

33. ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರೂಪ್–ಎ ಹಿರಿಯ ಅಧಿಕಾರಿಗಳಾಗಿದ್ದರೂ ಸಹ ಅವರಿಗೆ ರೂ 10,000 ಗಳ ಕೆಲಸದ ಬಿಲ್ ಪಾವತಿಸಲು ಅಧಿಕಾರವಿಲ್ಲ. ರಸ್ತೆ, ಕಟ್ಟಡ, ನೀರಾವರಿ ಮತ್ತು ಇತರ ಸ್ವತ್ತುಗಳ ತುರ್ತುನಿರ್ವಹಣೆಯನ್ನು ಕೈಗೊಳ್ಳಲು ಅವರಿಗೆ ಅಧಿಕಾರ ನೀಡಬಹುದು. ರೂ 10 ಲಕ್ಷಕ್ಕಿಂತ ಕಡಿಮೆ ವೆಚ್ಚದ ಕಾಮಗಾರಿಗಳಿಗೆ ವರ್ಕ್‌ಆರ್ಡರ್ ನೀಡುವ ಮತ್ತು ಬಿಲ್ ಪಾವತಿಸುವ ಅಧಿಕಾರವನ್ನು ಎಇಇಗಳಿಗೆ ವಹಿಸಬಹುದು. ರೂ 10 ಲಕ್ಷಕ್ಕಿತ ಕಡಿಮೆ ವೆಚ್ಚದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಎಇಇಗಳಿಗೆ ಚೆಕ್ ಮೇಜೆರ್‌ಮೆಂಟ್ ಮಾಡುವುದನ್ನು ಪ್ರಸ್ತುತ ಶೇ.90ರ ಬದಲು ಶೇ.100ರಷ್ಟು ವಹಿಸಬಹುದು. ಆರ್ಥಿಕ ಇಲಾಖೆಯು ಕಟ್ಟಡ ನಿರ್ವಹಣೆಯ ಖಾತೆ ಸಂಖ್ಯೆ 2059 ಮತ್ತು ತುರ್ತುರಸ್ತೆ ಕಾಮಗಾರಿಗಳ ಲೆಕ್ಕ ಶೀರ್ಷಿಕೆ ಸಂಖ್ಯೆ 3054 ಶೀರ್ಷಿಕೆಗಳ ಅಡಿಯಲ್ಲಿ ಎಇಇಗಳಿಗೆ ಹಣವನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಬಹುದು. ಜಲಸಂಪನ್ಮೂಲ, ಸಣ್ಣನೀರಾವರಿ, ಪಂಚಾಯತ್ ರಾಜ್ ಎಂಜಿನಿಯರಿಂಗ್, ಗ್ರಾಮೀಣ ನೀರು ಸರಬರಾಜು ಸೇರಿದಂತೆ ಎಲ್ಲಾ ಎಂಜಿನಿಯರಿಂಗ್ ಇಲಾಖೆಗಳ ಎಇಇಗಳಿಗೆ ಇಂತಹ ಅಧಿಕಾರಗಳನ್ನು ಅನ್ವಯಿಸಬಹುದು. ಇಲಾಖಾ ಸಂಹಿತೆ ಮತ್ತು ಅಧಿಕಾರಗಳ ಪ್ರತ್ಯಾಯೋಜನೆಯ ಆದೇಶಗಳಲ್ಲಿ ಸೂಕ್ತ ಮಾರ್ಪಾಡುಗಳನ್ನು ಪ್ರಸ್ತಾಪಿಸಬಹುದು.

34. ತುರ್ತು ಸಂದರ್ಭಗಳಲ್ಲಿ ಕೆಟಿಪಿಪಿ ಕಾಯ್ದೆಯ ಕಲಂ 4(ಜಿ) ಅಥವಾ ಕಲಂ 4(ಎ) ಅಡಿಯಲ್ಲಿ ವಿನಾಯಿತಿ ಅಗತ್ಯವಿದೆ. ಈ ಕಾಮಗಾರಿಗಳಲ್ಲಿ ವಿವಿಐಪಿ ಹೆಲಿಪ್ಯಾಡ್‌ಗಳ ನಿರ್ಮಾಣ, ಬ್ಯಾರಿಕೇಡ್, ಪತ್ರಿಕಾಗೋಷ್ಠಿಗಳು, ಕುಡಿಯುವ ನೀರು ಸರಬರಾಜಿನ ಮರುಸ್ಥಾಪನೆ, ವಿದ್ಯುತ್  ಸರಬರಾಜನ್ನು ಪುನರಾರಂಭಿಸುವುದು, ಗುಂಡಿಗಳನ್ನು ಮುಚ್ಚುವುದು ಮತ್ತು ಭದ್ರತೆ ಮತ್ತು ಸುರಕ್ಷತೆಯ ಹಿತದೃಷ್ಟಿಯಿಂದ ತಕ್ಷಣವೇ ಕೆಲಸ ಮಾಡಬೇಕಾದ ಇತರ ತುರ್ತು ಕಾರ್ಯಗಳು ಸೇರಿವೆ. ಅಂತಹ ಕಾಮಗಾರಿಗಳನ್ನು ತುಂಡು ದರದ ಆಧಾರದ ಮೇಲೆ ನಿರ್ವಹಿಸಲು ಮತ್ತು ಪಾವತಿಮಾಡಲು ಸೂಕ್ತ ಆಡಳಿತಾತ್ಮಕ, ಆರ್ಥಿಕ ಮತ್ತು ತಾಂತ್ರಿಕ ಅಧಿಕಾರಗಳನ್ನು ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ಎಇಇ) ಮತ್ತು ಕಾರ್ಯಪಾಲಕ ಎಂಜಿನಿಯರ್ (ಇಇ)ಗೆ ವಹಿಸಬಹುದು. ತುರ್ತು ಕಾಮಗಾರಿಗಳಿಗೆ ಹಣವನ್ನು ಹಂಚಿಕೆ ಮಾಡಬಹುದು ಮತ್ತು ಅಂತಹ ತುರ್ತುಕಾರ್ಯಗಳಿಗೆ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗೆ ತಿಂಗಳಿಗೆ ರೂ 2 ಲಕ್ಷಗಳ ಹಣಕಾಸು ಮಿತಿಯವರೆಗೆ ಬಳಸಲು ಅಧಿಕಾರ ನೀಡಬಹುದು.

## VIII. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ

35. ರಾಜ್ಯದ ಕುಶಲಕರ್ಮಿಗಳ ಕೊನೆಯ ಸಮೀಕ್ಷೆಯನ್ನು ಸುಮಾರು 17 ವರ್ಷಗಳ ಹಿಂದೆ ನಡೆಸಲಾಗಿತ್ತು. ಕುಶಲಕರ್ಮಿಗಳ ಆರ್ಥಿಕ ಅಭಿವೃದ್ಧಿಗೆ ಉದ್ದೇಶಿತ ಮಧ್ಯಸ್ಥಿಕೆಗಳಿಗಾಗಿ ವಿಶ್ವಾಸಾರ್ಹ ಮತ್ತು ನವೀಕರಿಸಿದ ಅಂಕಿಅಂಶಗಳನ್ನು ಪಡೆಯಲು ಹೊಸ ರಾಜ್ಯಮಟ್ಟದ ಸಮೀಕ್ಷೆಯನ್ನು ಕೈಗೊಳ್ಳಬಹುದು. ಪಡಿತರಚೀಟಿ ಸಂಖ್ಯೆಯಂತಹ ವಿವರಗಳೊಂದಿಗೆ ಕುಶಲಕರ್ಮಿಗಳ ಡೇಟಾಬೇಸ್ (ರೈತರ ಫ್ರೂಟ್ಸ್ ಡೇಟಾಬೇಸ್‌ನಂತೆ) ಅನ್ನು ಅಭಿವೃದ್ಧಿಪಡಿಸಬೇಕು. ಡೇಟಾವನ್ನು ಸಂಗ್ರಹಿಸಲು ಮೊಬೈಲ್ ಅಪ್ಲಿಕೇಶನ್‌ಅನ್ನು ಸಿದ್ಧಪಡಿಸಬಹುದು. ಯುಡಿಐಡಿಯಂತಹ ಸೂಕ್ತ ಗುರುತಿನ ಚೀಟಿಯನ್ನು ನೀಡಬಹುದು. ಕುಶಲಕರ್ಮಿಗಳ ವಿವರಗಳನ್ನು ಕೌಶಲ್ಕರ್ ಅಡಿಯಲ್ಲಿ ಕೌಶಲ್ಯಾಭಿವೃದ್ಧಿಗಾಗಿ ನೋಂದಾಯಿಸಲಾದ ಡೇಟಾಬೇಸ್‌ನಲ್ಲಿ ಸೇರಿಸಬಹುದು.

36. ಜಿಲ್ಲಾಧಿಕಾರಿಗಳು ಜಿಲ್ಲಾಡಳಿತ ವ್ಯವಸ್ಥೆಯಲ್ಲಿ ಸಾಕಷ್ಟು ಪ್ರಭಾವಿತ ಅಧಿಕಾರಗಳನ್ನು ಹೊಂದಿದ್ದಾರೆ. ಜಿಲ್ಲಾ ಪಂಚಾಯಿತಿಗಳ ಸಿಇಒಗಳಿಗೆ ಹೋಲಿಸಿದರೆ ಜಿಲ್ಲಾಧಿಕಾರಿಗಳು ಅಭಿವೃದ್ಧಿ ಚಟುವಟಿಕೆಗಳಲ್ಲಿ ಕಡಿಮೆ ತೊಡಗಿಸಿಕೊಂಡಿದ್ದಾರೆ. ಜಿಲ್ಲಾ ಪಂಚಾಯಿತಿಗಳ ಸಿಇಒಗಳು ಸಾಮಾಜಿಕ ಮತ್ತು ಕೃಷಿ ಕ್ಷೇತ್ರದ ಅಭಿವೃದ್ಧಿಯ ಉಸ್ತುವಾರಿ ವಹಿಸಿದ್ದರೂ, ಜಿಲ್ಲೆಯಲ್ಲಿ ಕೈಗಾರಿಕಾ ಅಭಿವೃದ್ಧಿಯ ಗುರಿ ಮತ್ತು ಜವಾಬ್ದಾರಿಯನ್ನು ಹೊಂದಿರುವ

**ಯಾವುದೇ ಪ್ರಾಧಿಕಾರವಿಲ್ಲ. ಕೈಗಾರಿಕಾ ಮತ್ತು ಸೇವಾ ಉದ್ಯಮಗಳ ಅಭಿವೃದ್ಧಿಗೆ ಜಿಲ್ಲಾಧಿಕಾರಿಗಳಿಗೆ ವಾರ್ಷಿಕ ಗುರಿಗಳನ್ನು ನೀಡುವಂತೆ ಶಿಫಾರಸು ಮಾಡಲಾಗಿದೆ. ಕರ್ನಾಟಕ ಉದ್ಯೋಗಮಿತ್ರ ಯೋಜನೆಗಳು ಮತ್ತು ದೊಡ್ಡ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಸಂದರ್ಭದಲ್ಲಿ, ಅವುಗಳ ಗುರಿಗಳು ಸಹ ದೊಡ್ಡ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಮತ್ತು ಸೇವೆಗಳ ಆಧಾರದ ಮೇಲೆ ಇರಬಹುದು.**

**37.** ಕರ್ನಾಟಕ ಕೈಗಾರಿಕಾ ನೀತಿ 2020–25, ಇದು ಕನಿಷ್ಠ 75 ಎಕರೆ ಪ್ರದೇಶದಲ್ಲಿ ಖಾಸಗಿ ಕೈಗಾರಿಕಾ ಲೇಔಟ್‌ಗಳ ರಚನೆಯನ್ನು ಪ್ರೋತ್ಸಾಹಿಸುತ್ತದೆ. ಕರ್ನಾಟಕದಲ್ಲಿ ಹೆಚ್ಚುತ್ತಿರುವ ಭೂಮಿಯ ಬೆಲೆಗಳನ್ನು ಗಮನದಲ್ಲಿಟ್ಟುಕೊಂಡು, 75 ಎಕರೆ ಭೂಮಿಯನ್ನು ಖರೀದಿಸಲು ಹೆಚ್ಚಿನ ಹೂಡಿಕೆಯ ಅಗತ್ಯವಿರುತ್ತದೆ ಮತ್ತು ಜಿಲ್ಲೆಗಳ ಮತ್ತು ತಾಲ್ಲೂಕುಗಳಲ್ಲಿನ ಅನೇಕ ಖಾಸಗಿ ಉದ್ಯಮಿಗಳಿಗೆ ಸಾಧ್ಯವಾಗುವುದಿಲ್ಲ. ಖಾಸಗಿ ಕೈಗಾರಿಕಾ ಪಾರ್ಕ್‌ಗಳನ್ನು **ಉತ್ತೇಜಿಸಲು, ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಖಾಸಗಿ ಕೈಗಾರಿಕಾ ಪಾರ್ಕ್‌ಗಳ ಪ್ರದೇಶವನ್ನು 75 ಎಕರೆಯಿಂದ 10 ಎಕರೆಗೆ ಮತ್ತು ಪಟ್ಟಣ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳನ್ನು ಹೊಂದಿರುವ ತಾಲ್ಲೂಕುಗಳಲ್ಲಿ 15 ಎಕರೆಗೆ ಇಳಿಸಲು ಕರ್ನಾಟಕ ಕೈಗಾರಿಕಾ ನೀತಿ 2020–25ನ್ನು ಮಾರ್ಪಡಿಸಲು ಶಿಫಾರಸು ಮಾಡಲಾಗಿದೆ.**

**38. ಜಿಲ್ಲಾಮಟ್ಟದ ಏಕಗವಾಕ್ಷಿ ಅನುಮತಿ ಸಮಿತಿ (ಎಸ್‌ಡಬ್ಲ್ಯೂಸಿಸಿ)ಗಳಿಗೆ ಅನುಮತಿ ಅವಧಿ ಮುಗಿದ ನಂತರವೂ ಕೈಗಾರಿಕೆಗಳನ್ನು ಸ್ಥಾಪಿಸದ ಕೆಐಎಡಿಬಿ ಮತ್ತು ಕೆಎಸ್‌ಎಸ್‌ಐಡಿಸಿ ಕೈಗಾರಿಕಾ ನಿವೇಶನಗಳನ್ನು ಗುರುತಿಸುವ ಅಭಿಯಾನವನ್ನು ಕೈಗೊಳ್ಳಲು ಸೂಚನೆ ನೀಡಬೇಕು. ಜಿಲ್ಲಾಮಟ್ಟದ ಏಕಗವಾಕ್ಷಿ ಅನುಮತಿ ಸಮಿತಿಯಲ್ಲಿ ಅಂತಿಮ ನಿರ್ಧಾರ ತೆಗೆದುಕೊಂಡ ನಂತರ, ಅಂತಹ ಖಾಲಿ ನಿವೇಶನಗಳನ್ನು ಪುನರಾರಂಭಿಸಬೇಕು ಅಥವಾ ನಿಯಮಗಳ ಪ್ರಕಾರ ರದ್ದುಗೊಳಿಸಲು ಶಿಫಾರಸು ಮಾಡಬೇಕು. ಅವುಗಳನ್ನು ಇತರ ಅರ್ಹ ಅರ್ಜಿದಾರರಿಗೆ ಮರುಹಂಚಿಕೆ ಮಾಡಬಹುದು. ನಿರ್ದಿಷ್ಟ ಪ್ರದೇಶಕ್ಕಿಂತ ಕಡಿಮೆಯಿರುವ ಭೂಮಿಯನ್ನು ಪುನರಾರಂಭಿಸಲು ಜಿಲ್ಲಾಮಟ್ಟದ ಏಕಗವಾಕ್ಷಿ ಅನುಮತಿ ಸಮಿತಿಗೆ ಅಧಿಕಾರ ನೀಡಬೇಕು.**

**39. ಖಾದಿ ಮತ್ತು ಗ್ರಾಮೋದ್ಯೋಗ ಇಲಾಖೆಯ ಉಪನಿರ್ದೇಶಕರ ತಂಡವನ್ನು ಉತ್ತಮವಾಗಿ ಬಳಸಿಕೊಳ್ಳುವಸಲುವಾಗಿ, ಸಿ&ಐ ಇಲಾಖೆಯು ಗ್ರಾಮೀಣ ಕೈಗಾರಿಕೆಗಳು, ಕುಶಲಕರ್ಮಿಗಳು ಮತ್ತು ವಸತಿಯ ರಾಜ್ಯವಲಯದ ಯೋಜನೆಗಳ ಅನುಷ್ಠಾನ ಮತ್ತು ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಜಂಟಿ ನಿರ್ದೇಶಕರು, ಡಿಐಸಿಯಿಂದ ಉಪ ನಿರ್ದೇಶಕರು, ಕೆವಿಐ (ಆರ್‌ಐ)ಗೆ ವರ್ಗಾಯಿಸಲು ಪರಿಗಣಿಸಬಹುದು. ಪರ್ಯಾಯವಾಗಿ, ಈ ಯೋಜನೆಗಳನ್ನು ರಾಜ್ಯವಲಯದಿಂದ ಜಿಲ್ಲಾಪಂಚಾಯತ್ ವಲಯಕ್ಕೆ ವರ್ಗಾಯಿಸಬಹುದು. ಈ ರೀತಿಯಾಗಿ ಉಪ ನಿರ್ದೇಶಕರು, ಕೆವಿಐ ರವರ ಸೇವೆಗಳನ್ನು ಉತ್ತಮವಾಗಿ ಬಳಸಿಕೊಳ್ಳಬಹುದು.**

### ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ

**40. ಕಲಂ 4ಬಿ ಯಲ್ಲಿ ನಿಗದಿಪಡಿಸಿದ ಕಾರ್ಯವಿಧಾನವನ್ನು ಅನುಸರಿಸಿದ ನಂತರ 2 ಎಕರೆಗಿಂತ ಕಡಿಮೆ ಅಳತೆಯ ಭೂಮಿಯನ್ನು ಮರುಸ್ವಾಧೀನಪಡಿಸಿಕೊಳ್ಳಲು ಕಲಂ 34ಬಿ ಅಡಿಯಲ್ಲಿ ಅಧಿಕಾರವನ್ನು ಜಿಲ್ಲಾಮಟ್ಟದ ಏಕಗವಾಕ್ಷಿ ಅನುಮತಿ ಸಮಿತಿಗೆ ವಹಿಸಲು ಸರ್ಕಾರ ಪರಿಗಣಿಸಬಹುದು. ಪುನರಾರಂಭದ ಪ್ರಸ್ತಾಪವನ್ನು ಸಿಇಒಗೆ ಕಳುಹಿಸುವ ಅಗತ್ಯವಿಲ್ಲ. ಅಗತ್ಯವಿದ್ದರೆ, ಕಲಂ 34ಬಿ ಅಡಿಯಲ್ಲಿ ಅಧಿಕಾರವನ್ನು ಜಿಲ್ಲಾಮಟ್ಟದ ಏಕಗವಾಕ್ಷಿ ಅನುಮತಿ ಸಮಿತಿ ಅಥವಾ ಮಂಡಳಿಯಿಂದ ಅಧಿಕಾರ ಪಡೆದ ಯಾವುದೇ ಸಂಸ್ಥೆ ಅಥವಾ ಅಧಿಕಾರಿಗೆ ವಹಿಸಲು ಸೆಕ್ಷನ್ 34ಬಿ ಗೆ ಸೂಕ್ತ ತಿದ್ದುಪಡಿಯನ್ನು ಪ್ರಸ್ತಾಪಿಸಬಹುದು.**

41. **ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆ (ಸಿಟಿಐ)** ಇದು ರಾಜ್ಯದ ಅತ್ಯಂತ ಹಳೆಯ ವೃತ್ತಿಪರ ತರಬೇತಿ ಸಂಸ್ಥೆಗಳಲ್ಲಿ ಒಂದಾಗಿದೆ. ಇದನ್ನು 1913ರಲ್ಲಿ ಸ್ಥಾಪಿಸಲಾಯಿತು. ಈಗ ಸಂಸ್ಥೆಯಲ್ಲಿ ಕೇವಲ ಇಬ್ಬರು ತರಬೇತುದಾರರು ಮಾತ್ರ ಕೆಲಸ ಮಾಡುತ್ತಿದ್ದಾರೆ. ಈ ಸಂಸ್ಥೆ ಕಳೆದ 3–4 ವರ್ಷಗಳಿಂದ ತರಬೇತಿ ಕಾರ್ಯಕ್ರಮಗಳನ್ನು ನಡೆಸುವುದನ್ನು ನಿಲ್ಲಿಸಿದೆ. **ಸಿಟಿಐ ಅನ್ನು ಚಾಮರಾಜೇಂದ್ರ ಕೈಗಾರಿಕಾ ತರಬೇತಿ ಸಂಸ್ಥೆ (ಸಿಟಿಐ) ಎಂದು ನಡೆಸಲು ಕೌಶಲ್ಯ ಅಭಿವೃದ್ಧಿ**

ಇಲಾಖೆಯಡಿ ಬರುವ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಗೆ ಬಳಕೆಯ ಆಧಾರದ ಮೇಲೆ ವರ್ಗಾಯಿಸಲು ಶಿಫಾರಸು ಮಾಡಲಾಗಿದೆ. ಸಿ&ಐ ಇಲಾಖೆಯು ಭೂಮಿಯ ಮಾಲೀಕತ್ವವನ್ನು ಉಳಿಸಿಕೊಳ್ಳಬಹುದು.

42. ಸುಮಾರು 500 ವಿಶ್ವ ವರ್ಕ್‌ಶೆಡ್‌ಗಳನ್ನು ಇತರ ಬಳಕೆದಾರರಿಗೆ ಹಂಚಿಕೆ ಮಾಡಲಾಗಿಲ್ಲ ಎಂದು ವರದಿಯಾಗಿದೆ. ಬಳಕೆ ಮತ್ತು ನಿರ್ವಹಣೆಯ ಕೊರತೆಯಿಂದಾಗಿ ಬಳಕೆಯಾಗದ ವರ್ಕ್‌ಶೆಡ್‌ಗಳು ಕುಸಿಯುವ ಅಪಾಯದಲ್ಲಿದೆ. **ಸಿ&ಐ ಇಲಾಖೆಯು ಹಂಚಿಕೆಯಾಗದೆ ಉಳಿದ ವಿಶ್ವ ವರ್ಕ್‌ಶೆಡ್‌ಗಳನ್ನು ಆಸ್ತಿಯ ಹಕ್ಕುಗಳನ್ನು ವರ್ಗಾಯಿಸದೆ ಸಾರ್ವಜನಿಕ ಉದ್ದೇಶಗಳಿಗಾಗಿ ಮಾತ್ರ ಬಳಸಲು ಗ್ರಾಮಪಂಚಾಯಿತಿಗಳು ಮತ್ತು ಪುರಸಭೆಗಳಿಗೆ ಹಸ್ತಾಂತರಿಸಲು ಆದೇಶ ಹೊರಡಿಸಬಹುದು.**

**43. ನಗರ ಮತ್ತು ಗ್ರಾಮೀಣ ಪ್ರದೇಶಗಳ ವಸತಿ ಪ್ರದೇಶಗಳಲ್ಲಿ ರೂ 1 ಕೋಟಿವರೆಗಿನ ಬಂಡವಾಳ ಹೂಡಿಕೆಯೊಂದಿಗೆ ಸೂಕ್ಷ್ಮ ಪ್ರಮಾಣದ ಗಾರ್ಮೆಂಟ್ ಮತ್ತು ಕಸೂತಿ. ಘಟಕಗಳನ್ನು ಮತ್ತು ರೂ 50 ಲಕ್ಷವರೆಗಿನ ಕೈಮಗ್ಗ ಘಟಕಗಳನ್ನು ಸ್ಥಾಪಿಸಲು ಅನುಮತಿ ನೀಡಲು ನಗರಯೋಜನಾ ಇಲಾಖೆಯ ವಲಯ ನಿಯಮಾವಳಿಗಳಿಗೆ ತಿದ್ದುಪಡಿ ತರಲು ಸಿ&ಐ ಇಲಾಖೆಯು ಪ್ರಸ್ತಾಪಿಸಬಹುದು.**

44. 74 ಸಕ್ಕರೆ ಕಾರ್ಖಾನೆಗಳ ಪೈಕಿ ಕೇವಲ 14 ಸಹಕಾರಿ ಕಾರ್ಖಾನೆಗಳು ಮತ್ತು ಉಳಿದ 60 ಖಾಸಗಿ ಕಾರ್ಖಾನೆಗಳು ಇವೆ. **ಆದ್ದರಿಂದ, ಸಕ್ಕರೆ ಮತ್ತು ಕಬ್ಬು ಅಭಿವೃದ್ಧಿ ನಿರ್ದೇಶನಾಲಯದಲ್ಲಿ ಸಹಕಾರಿ ಅಧಿಕಾರಿಗಳ ಅಗತ್ಯವಿಲ್ಲದಿರಬಹುದು; ನಿರ್ದೇಶನಾಲಯದಲ್ಲಿ ಸಹಕಾರಿ ಅಧಿಕಾರಿ ಮುಂತಾದ ಸಹಕಾರಿ ಇಲಾಖೆ ಹುದ್ದೆಗಳನ್ನು ರದ್ದುಗೊಳಿಸಬಹುದು.**

## IX. ಗಣಿ ಮತ್ತು ಭೂವಿಜ್ಞಾನ ಇಲಾಖೆ

**45. ಗುತ್ತಿಗೆದಾರರ ಮೇಲೆ ಕ್ವಾರಿ ಮಟ್ಟಗಳನ್ನು ತೋರಿಸುವುದು, ಪರಿಮಾಣವನ್ನು ಕಡಿತಗೊಳಿಸುವುದು, ಪಾವತಿಸಬೇಕಾದ ರಾಯಧನ ಮತ್ತು ಪಾವತಿಸುವ ಜವಾಬ್ದಾರಿಯನ್ನು ನಿಗದಿಪಡಿಸಬಹುದು. ಇಲಾಖೆಯ ಅಧಿಕಾರಿಗಳು ಗುತ್ತಿಗೆದಾರನು ಸಲ್ಲಿಸಿದ ವಿಶ್ವಾಸನೀಯ ದತ್ತಾಂಶವನ್ನು ಸ್ವೀಕರಿಸಬೇಕು. ಆದಾಗ್ಯೂ, ವರದಿಯಾದ ಕಡಿತದ ಪ್ರಮಾಣವನ್ನು ಇಲಾಖೆಯು ಪರೀಕ್ಷಿಸಬಹುದು ಮತ್ತು ಪರಿಶೀಲಿಸಬಹುದು. ಮೇಲಿನ ಷರತ್ತುಗಳನ್ನು ಎಲ್ಲಾ ಗುತ್ತಿಗೆ ಒಪ್ಪಂದಗಳಲ್ಲಿ ಸೇರಿಸಬಹುದು. ಆದ್ದರಿಂದ, ನಿಯಮ 42 ರ ಅಡಿಯಲ್ಲಿ ಸಮಗ್ರ ಗುತ್ತಿಗೆ ನಿರ್ವಹಣಾ ವ್ಯವಸ್ಥೆ (ಐಎಲ್ಎಂಎಸ್) ಅರ್ಜಿ ನಮೂನೆಯನ್ನು ಪರಿಷ್ಕರಿಸಬಹುದು, ಇದರಿಂದ ಪರವಾನಗಿದಾರ–ಅರ್ಜಿದಾರರು (ಎ) ವರ್ಷದ ಮಾರ್ಚ್–31 ಮತ್ತು ಏಪ್ರಿಲ್–1 ರವರೆಗೆ ಗಣಿಗಾರಿಕೆಯ ಮಟ್ಟಗಳ ಬಗ್ಗೆ ಸ್ವಯಂಘೋಷಣೆಯನ್ನು ಒಳಗೊಂಡಿರುತ್ತದೆ (ಬಿ) ಗಣಿಗಾರಿಕೆ ಮಾಡಿದ ಸಂಚಿತ ಪರಿಮಾಣ ಮತ್ತು (ಸಿ) ಗಣಿಗಾರಿಕೆ ಪರಿಮಾಣಕ್ಕೆ ತೆಗೆದುಕೊಂಡ ಎಂಡಿಪಿಗಳು. ಈ ಮಾಹಿತಿಯನ್ನು ಐಎಲ್ಎಂಎಸ್‌ನಲ್ಲಿ ನಮೂದಿಸದಿದ್ದರೆ, ಸಿಸ್ಟಮ್‌ನಿಂದ ಎಂಡಿಪಿ ಉತ್ಪಾದನೆಯನ್ನು ನಿರ್ಬಂಧಿಸಬೇಕು.**

46. ಲೋಕೋಪಯೋಗಿ, ಗ್ರಾಮೀಣ ನೀರು ಸರಬರಾಜು ಇಲಾಖೆ, ಜಲಸಂಪನ್ಮೂಲ ಮತ್ತು ಇತರ ಸರ್ಕಾರಿ ಇಲಾಖೆಗಳು ಉತ್ಖನನ ಮಾಡಿದ ಖನಿಜಗಳನ್ನು ಬಳಸುತ್ತವೆ. ಕೆಎಂಎಂಸಿಆರ್ ನಿಯಮ–42 ರನ್ವಯ ಖನಿಜ ರವಾನೆ ಪರವಾನಿಗೆ ಇದ್ದರೆ ಮಾತ್ರ ಖನಿಜಗಳನ್ನು ಸಾಗಿಸುವುದನ್ನು ಕಡ್ಡಾಯಗೊಳಿಸಿದ್ದರೂ, ರಾಜಧನವನ್ನು ಕಾಮಗಾರಿ ಬಿಲ್ಲುಗಳಿಂದ ಕಡಿತಗೊಳಿಸುವ ಮೂಲಕ ಸಂಗ್ರಹಿಸಲು ಮಧ್ಯಂತರ ನಿಬಂಧನೆಯನ್ನು ಮಾಡಲಾಗಿದೆ. ಖನಿಜ ರವಾನೆ ಪರವಾನಿಗೆ ವ್ಯವಸ್ಥೆಯು(ಐಎಲ್ಎಂಎಸ್) ಸುಸ್ಥಿರವಾಗಿದ್ದು ವ್ಯಾಪಕವಾಗಿ ಬಳಸಲಾಗುತ್ತಿದೆ. **ಗುತ್ತಿಗೆದಾರರಿಗೆ ನಿಯಮ 42ನ್ನು ಕಟ್ಟುನಿಟ್ಟಾಗಿ ಅನುಸರಿಸಲು ಮತ್ತು ಖನಿಜ ರವಾನೆ ಪರವಾನಿಗೆಯೊಂದಿಗೆ ಖನಿಜಗಳನ್ನು ಮಾತ್ರ ಬಳಸಲು ಕಟ್ಟುನಿಟ್ಟಾಗಿ ತಿಳಿಸಬೇಕು. ಖನಿಜ ರವಾನೆ ಪರವಾನಿಗೆ ಸಲ್ಲಿಸದಿದ್ದರೆ, ರಾಜಧನದ 5ಪಟ್ಟು ದಂಡ, ಜೊತೆಗೆ ಡಿಎಂಎಫ್ ವಂತಿಗೆ ಮತ್ತು ಸರಾಸರಿ ಹೆಚ್ಚುವರಿ ಆವರ್ತಕ (ಎಎಪಿ) ಪಾವತಿಯನ್ನು ಕಡಿತಗೊಳಿಸಬೇಕು.**

47. **ಉಪಖನಿಜಗಳ ರಾಜಧನವನ್ನು ಮಾರುಕಟ್ಟೆ ಬೆಲೆಯ ಆಧಾರದ ಮೇಲೆ ಅಂದರೆ ಅಡ್–ವೇಲೋರೆಮ್ ಆಧಾರದ ಮೇಲೆ ನಿಗದಿಪಡಿಸಬೇಕೆಂದು ಶಿಫಾರಸು ಮಾಡಲಾಗಿದೆ. ಉಪಖನಿಜಗಳ ಮಾರುಕಟ್ಟೆ ಬೆಲೆಯನ್ನು ನಿರ್ಧರಿಸಲು**

**ಡಿಎಂಜಿಯಲ್ಲಿ ಸ್ಟೇಟ್ ಬ್ಯೂರೋ ಆಫ್ ಸೈನ್ಸ್‌ನಲ್ಲಿ ವಿಭಾಗವನ್ನು ರಚಿಸಬಹುದು. ಮಾರುಕಟ್ಟೆ ಬೆಲೆಯನ್ನು ನಿರ್ಧರಿಸಲು ಮತ್ತು ಮಾರುಕಟ್ಟೆ ಬೆಲೆಗಳನ್ನು ಪ್ರಕಟಿಸಲು ಇಂಡಿಯನ್ ಬ್ಯೂರೋ ಆಫ್ ಸೈನ್ಸ್ ಅಳವಡಿಸಿಕೊಂಡ ಕಾರ್ಯವಿಧಾನವನ್ನು ಅನುಸರಿಸುವುದರ ಜೊತೆಗೆ ನೆರೆಯ ರಾಜ್ಯಗಳಲ್ಲಿನ ಮಾರುಕಟ್ಟೆ ಬೆಲೆಗಳು ಮತ್ತು ರಾಯಧನದ ಅಧ್ಯಯನ ಮಾಡಬಹುದು. ಸರ್ಕಾರವು ಅಧಿಸೂಚನೆಯ ಮೂಲಕ ಪ್ರತಿವರ್ಷ ಮಾರ್ಚ್ 31 ರಂದು ಅಥವಾ ಅದಕ್ಕೂ ಮೊದಲು ಸಂಬಂಧಿತ ಮಾರುಕಟ್ಟೆ ಬೆಲೆ ಮತ್ತು ರಾಜಧನವನ್ನು ವಾರ್ಷಿಕ ಆಧಾರದ ಮೇಲೆ ಪರಿಷ್ಕರಿಸಬಹುದು.**

48. ಹರಾಜಿಗಾಗಿ ಗುರುತಿಸಲಾದ ರಾಜ್ಯದ 314 ಸಾಮಾನ್ಯ ಕಟ್ಟಡ ಕಲ್ಲು (ಒಬಿಎಸ್) ಬ್ಲಾಕ್‌ಗಳಲ್ಲಿ ಕೇವಲ 15–20 ಬ್ಲಾಕ್‌ಗಳನ್ನು ಮಾತ್ರ ಹರಾಜು ಮಾಡಲಾಗಿದೆ ಎಂದು ವರದಿಯಾಗಿದೆ. ಉಳಿದವು ಕಂದಾಯ ಮತ್ತು ಅರಣ್ಯ ಇಲಾಖೆಗಳ ನಿರಾಕ್ಷೇಪಣಾ ಪತ್ರಗಳನ್ನು ಸಲ್ಲಿಸದೆ ಇರುವುದರಿಂದ ಬಾಕಿ ಉಳಿದಿವೆ. **ಸರ್ಕಾರವು ಜಿಲ್ಲಾಧಿಕಾರಿಗಳಿಗೆ ಈ ಬ್ಲಾಕ್‌ಗಳಿಗೆ ಬಾಕಿ ಇರುವ ನಿರಾಕ್ಷೇಪಣಾ ಪತ್ರಗಳನ್ನು ಪರಿಶೀಲಿಸಲು ಮತ್ತು ತ್ವರಿತಗೊಳಿಸಲು ಮಾಸಿಕ ಸಭೆಗಳನ್ನು ನಡೆಸುವಂತೆ ಸೂಚನೆ ನೀಡಬಹುದು. ಸಿ&ಐ ಇಲಾಖೆಯು ನಿರಾಕ್ಷೇಪಣಾ ಪತ್ರಗಳು ಮತ್ತು ಅನುಮತಿಗಳ ವಿತರಣೆಯನ್ನು ನಿಯಮಿತವಾಗಿ ಪರಿಶೀಲಿಸಲು ಮತ್ತು ತ್ವರಿತಗೊಳಿಸಲು ಕಂದಾಯ, ಅರಣ್ಯ ಮತ್ತು** ಗಣಿ **ಇಲಾಖೆಗಳ ಸಚಿವರನ್ನು ಒಳಗೊಂಡ ಸಂಪುಟ ಉಪಸಮಿತಿಯನ್ನು ರಚಿಸಲು ಸರ್ಕಾರಕ್ಕೆ ಪ್ರಸ್ತಾಪಿಸಬಹುದು.**

**49. ಪ್ರತಿ ಖನಿಜ ಸಂರಕ್ಷಣಾ ಪಡೆಯ ಜೊತೆಗೆ ಜಾರಿ ದಳಗಳನ್ನು ಸ್ಥಾಪಿಸಬಹುದು.** ಹಿರಿಯ ಭೂವಿಜ್ಞಾನಿ ನೇತೃತ್ವದಲ್ಲಿ ಇಬ್ಬರು ಭೂವಿಜ್ಞಾನಿಗಳು ಮತ್ತು ಇತರರನ್ನು ಕಡಿಮೆ ಖನಿಜ ಉತ್ಪಾದನೆ ಇರುವ ಜಿಲ್ಲೆಗಳಿಂದ ಮರುನಿಯೋಜಿಸುವ ಮೂಲಕ ತಂಡವನ್ನು ರಚಿಸಬಹುದು. **ವಿಭಾಗೀಯ ಮಟ್ಟದಲ್ಲಿ, ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟಲು ಜಂಟಿ ನಿರ್ದೇಶಕರ ಅಡಿಯಲ್ಲಿ ಕೆಲಸ ಮಾಡಲು ಕರ್ನಾಟಕ ಕೈಗಾರಿಕಾ ಭದ್ರತಾಪಡೆ ಕಾನ್‌ಸ್ಟೇಬಲ್‌ಗಳನ್ನು ಒಳಗೊಂಡ ಜಾರಿದಳಗಳನ್ನು ರಚಿಸಬಹುದು.** ಇದು ಖನಿಜ ಸಮೃದ್ಧ ಪ್ರದೇಶಗಳಲ್ಲಿ ಅಕ್ರಮ ಗಣಿಗಾರಿಕೆಯನ್ನು ನಿಯಂತ್ರಿಸಲು ಇಲಾಖೆಯನ್ನು ಬಲಪಡಿಸುತ್ತದೆ.

**50.** ಗಣಿ ಸಮೀಕ್ಷೆಯ ಉದ್ದೇಶಕ್ಕಾಗಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ (ಡಿಎಂಜಿ) ಸಿವಿಲ್ ಎಂಜಿನಿಯರ್ ಹುದ್ದೆಗಳನ್ನು ಸೃಜಿಸಲಾಗಿದೆ. ಆದರೆ ಗಣಿ ಸಮೀಕ್ಷೆಯು ಗಣಿ ಎಂಜಿನಿಯರ್‌ಗಳ ಪಠ್ಯಕ್ರಮದ ಭಾಗವಾಗಿದೆ. **ಆದ್ದರಿಂದ, ಇಲಾಖೆಯಲ್ಲಿ ಸಿವಿಲ್ ಎಂಜಿನಿಯರ್‌ಗಳ ಹುದ್ದೆಗಳನ್ನು ಮುಂದುವರೆಸುವ ಅಗತ್ಯವಿಲ್ಲ. ಪ್ರಸ್ತುತ ಕೆಲಸ ಮಾಡುತ್ತಿರುವ ಸಿವಿಲ್ ಎಂಜಿನಿಯರ್‌ಗಳು ತಮ್ಮ ನಿವೃತ್ತಿಯವರೆಗೆ ಮುಂದುವರಿಯಬಹುದು ಅಥವಾ ಇತರ ಎಂಜಿನಿಯರಿಂಗ್ ವಿಭಾಗಗಳಿಗೆ ನಿಯೋಜಿಸಬಹುದು. ಖಾಲಿ ಇರುವ ಹುದ್ದೆಗಳನ್ನು ಭೂವಿಜ್ಞಾನಿಗಳು ಮತ್ತು ಗಣಿ ಎಂಜಿನಿಯರ್ ಹುದ್ದೆಗಳಾಗಿ ಪರಿವರ್ತಿಸಬಹುದು.**

## X. ಆರ್ಥಿಕ ಇಲಾಖೆ

**51. ಹಿರಿಯ ಅಧಿಕಾರಿಗಳ ಜಾಗೃತಿಗಾಗಿ, ಡಿಡಿಒಗಳು, ಇಲಾಖಾ ಮುಖ್ಯಸ್ಥರು ಮತ್ತು ಇಲಾಖೆಗಳ ಕಾರ್ಯದರ್ಶಿಗಳಿಗೆ ಹಿಂದಿನ ತಿಂಗಳಿನಿಂದ ಸಂಬಳ ನೀಡದ ನಿಯಮಿತ ಮತ್ತು ಹೊರಗುತ್ತಿಗೆ ಸಿಬ್ಬಂದಿಯ ಸಂಖ್ಯೆಯ ಬಗ್ಗೆ ಎಚ್‌ಆರ್‌ಎಂಎಸ್ ಸೆಲ್ ಮಾಸಿಕ ಎಸ್‌ಎಂಎಸ್‌ಗಳನ್ನು ಕಳುಹಿಸಬಹುದು ಎಂದು ಶಿಫಾರಸು ಮಾಡಲಾಗಿದೆ.** ವಿಳಂಬವಾದ ವೇತನ, ಅನಧಿಕೃತ ಗೈರುಹಾಜರಿ ಇತ್ಯಾದಿಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ತ್ವರಿತವಾಗಿ ಪರಿಹರಿಸಲಾಗಿದೆಯೆ ಎಂದು ಖಚಿತಪಡಿಸಿಕೊಂಡು ಪರಿಶೀಲಿಸಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಇದು ಹಿರಿಯ ಅಧಿಕಾರಿಗಳನ್ನು ಜಾಗೃತರನ್ನಾಗಿಸುತ್ತದೆ.

**52.** ಗುತ್ತಿಗೆ ನಿರ್ವಹಣಾ ವ್ಯವಸ್ಥೆಯು ಇಪ್ರೊಕ್ 1.0 ನ ಭಾಗವಾಗಿದ್ದರೂ, ಸಹ ಅದನ್ನು ಬಳಸಲಾಗಿಲ್ಲ. **ಇ–ಪ್ರೊಕ್ 2.0 ನಲ್ಲಿನ ಗುತ್ತಿಗೆ ನಿರ್ವಹಣಾ ವ್ಯವಸ್ಥೆಯನ್ನು ಕಾರ್ಯಗತಗೊಳಿಸಿ ಕಡ್ಡಾಯವಾಗಿ ಬಳಸಬಹುದು. ಈ ಉದ್ದೇಶಕ್ಕಾಗಿ ಆರ್ಥಿಕ ಇಲಾಖೆಯಿಂದ ಸೂಕ್ತ ಸರ್ಕಾರಿ ಆದೇಶವನ್ನು ಹೊರಡಿಸಬಹುದು.**

**53.** ಇ–ಪ್ರೊಕ್ಯೂರ್ಮೆಂಟ್ 1.0 ಆವೃತ್ತಿಯು ಇ–ಎಂಬಿ, ಇ–ಬಿಲ್ಲಿಂಗ್ ಮತ್ತು ಕಾಂಟ್ರಾಕ್ಟ್ ಮ್ಯಾನೇಜ್‌ಮೆಂಟ್ ಪ್ರಕ್ರಿಯೆಗಳನ್ನು ರೆಕಾರ್ಡ್ ಮಾಡುವ ಮಾಡ್ಯೂಲ್‌ನ್ನು ಒಳಗೊಂಡಿದೆ, ಆದರೆ ಅವು ಪ್ರಸ್ತುತ ಕಡಿಮೆ ಬಳಕೆಯಲ್ಲಿವೆ.

ಪಾವತಿ ಮಾಡುವುದನ್ನು ಗುತ್ತಿಗೆ ನಿರ್ವಹಣಾ ಮಾಡ್ಯೂಲ್‌ನ ಬಳಕೆಗೆ ಲಿಂಕ್ ಮಾಡದ ಹೊರತು, ಅದನ್ನು ಪೂರ್ಣ ಸಾಮರ್ಥ್ಯಕ್ಕೆ ಬಳಸಲಾಗುವುದಿಲ್ಲ. ಆದ್ದರಿಂದ, ಆರ್ಥಿಕ ಇಲಾಖೆಯು ಖಜಾನೆ–2 ಮತ್ತು ಇ–ಪ್ರೊಕ್ಯೂರ್ಮೆಂಟ್ 2.0 ಅನ್ನು ಆದಷ್ಟು ಬೇಗ ಸಂಯೋಜಿಸಿ ಪೂರ್ಣಗೊಳಿಸಲು ಶಿಫಾರಸು ಮಾಡಲಾಗಿದೆ ಮತ್ತು ಎಲ್ಲಾ ಕೆಲಸದ ಬಿಲ್ಲುಗಳನ್ನು ಖಜಾನೆ–2 ನೊಂದಿಗೆ ಇ–ಪ್ರೊಕ್ಯೂರ್ಮೆಂಟ್ ಗುತ್ತಿಗೆ ನಿರ್ವಹಣಾ ವ್ಯವಸ್ಥೆಯನ್ನು ಸಂಯೋಜನೆ ಮಾಡುವ ಮೂಲಕ ಮಾತ್ರ ಪಾವತಿಸಬೇಕೆಂದು ಆದೇಶ ಹೊರಡಿಸಬಹುದು.

54. ನರೇಗಾ ಕೆಲಸಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಡೊಮೇನ್‌ನಲ್ಲಿ ಇರಿಸಲಾದ ಎಲ್ಲವನ್ನೂ ರಾಜ್ಯಮಟ್ಟದ ಇಪ್ರೊಕ್ಯೂರ್ಮೆಂಟ್ ಕಾಮಗಾರಿಗಳಿಗಾಗಿ ಸಾರ್ವಜನಿಕ ಡೊಮೇನ್‌ನಲ್ಲಿ ಇಡಬಹುದು. ಆದ್ದರಿಂದ, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ಲಭ್ಯವಿರುವ ಅಂತಹ ಎಲ್ಲಾ ದಾಖಲೆಗಳನ್ನು ಸಾರ್ವಜನಿಕ ಡೊಮೇನ್‌ಗೆ ಅಪ್ಲೋಡ್ ಮಾಡಲು ಶಿಫಾರಸು ಮಾಡಲಾಗಿದೆ, ಇದರಿಂದ ಆರ್‌ಟಿಐ ಅರ್ಜಿದಾರರು ಅಗತ್ಯ ಶುಲ್ಕವನ್ನು ಪಾವತಿಸಬಹುದು ಮತ್ತು ಅಗತ್ಯ ದಾಖಲೆಗಳನ್ನು ಡೌನ್ಲೋಡ್ ಮಾಡಿಕೊಳ್ಳಬಹುದು.

55. ನಗರಾಭಿವೃದ್ಧಿ ಇಲಾಖೆಯು ಕಟ್ಟಡ ಅನುಮೋದನೆ ಶುಲ್ಕ, ಅಭಿವೃದ್ಧಿ ಶುಲ್ಕ, ರಸ್ತೆಕಡಿತ ಶುಲ್ಕಗಳು ಮತ್ತು ಸಾಮಗ್ರಿ ಶೇಖರಣಾ ಶುಲ್ಕಗಳನ್ನು ಒಟ್ಟಾರೆ ಮೊತ್ತದ ಬದಲಾಗಿ ಕಟ್ಟಡದ ಅಂದಾಜು ವೆಚ್ಚದ ಅಥವಾ ನಿವೇಶನದ ಮಾರ್ಗಸೂಚಿ ದರದ ಶೇಕಡಾವಾರು ನಿಗದಿಪಡಿಸಲು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಸೂಚಿಸಿ ಆದೇಶ ಹೊರಡಿಸಲು ಶಿಫಾರಸು ಮಾಡಲಾಗಿದೆ.

## XI. ಕಾನೂನು ಇಲಾಖೆ

56. ಇ–ಆಡಳಿತ ಇಲಾಖೆಯಿಂದ ಪ್ರತಿ ಇಲಾಖೆಗೆ ವಕೀಲರ ಶುಲ್ಕವನ್ನು ಪಾವತಿಸಲು ಏಕೀಕೃತ ಪೋರ್ಟಲ್‌ನ್ನು ಅಭಿವೃದ್ಧಿಪಡಿಸಬೇಕು. ಈ ಪೋರ್ಟಲ್ ಮೂಲಕ ಸರ್ಕಾರಿ ವಕೀಲರು ಮತ್ತು ಪ್ಯಾನಲ್ ವಕೀಲರು ತಮ್ಮ ಎಲ್ಲಾ ವೃತ್ತಿಪರ ಶುಲ್ಕ ಬಿಲ್ಲುಗಳನ್ನು ನೇರವಾಗಿ ಆನ್‌ಲೈನ್‌ನಲ್ಲಿ ಸಲ್ಲಿಸಬಹುದು, ಕಾನೂನು ಇಲಾಖೆ ಮತ್ತು ಕಾನೂನು ಕೋಶಕ್ಕೆ ಲಾಗಿನ್ ಒದಗಿಸಲಾಗಿದೆ. ವೃತ್ತಿಪರ ಶುಲ್ಕದ ದರಪಟ್ಟಿಗಳನ್ನು ಮಾಸಿಕ ಆಧಾರದ ಮೇಲೆ ಪೂರ್ಣಗೊಳಿಸಬೇಕು ಮತ್ತು ಪಾವತಿಗಳನ್ನು ವಕೀಲರಿಗೆ ಚೆಕ್‌ಗಳ ಬದಲಾಗಿ ನೇರವಾಗಿ ಅವರ ಗೊತ್ತುಪಡಿಸಿದ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕು.

## XII. ಆಯೋಗದ ಐದೂ ವರದಿಗಳ ಮೇಲೆ ತೆಗೆದುಕೊಂಡ ಕ್ರಮಗಳು :

1) ಆಯೋಗವು ಈಗಾಗಲೇ ಸರ್ಕಾರಕ್ಕೆ 5 ವರದಿಗಳನ್ನು ಸಲ್ಲಿಸಿದೆ.
2) ಒಟ್ಟು 23 ಇಲಾಖೆಗಳಿಗೆ ಸಂಬಂಧಿಸಿದಂತೆ 3630 ಶಿಫಾರಸುಗಳನ್ನು ಮಾಡಿದ್ದು ಅವುಗಳ ಮೇಲೆ ಸರ್ಕಾರವು ತೆಗೆದುಕೊಂಡ ಕ್ರಮಗಳ ವಿವರಗಳ ಸಾರಾಂಶವನ್ನು ಈ ಕೆಳಗೆ ನೀಡಲಾಗಿದೆ.

| ಆಯೋಗವು ಮಾಡಿದ ಒಟ್ಟು ಶಿಫಾರಸುಗಳ ಸಂಖ್ಯೆ | ಸರ್ಕಾರವು ಅನುಷ್ಠಾನ ಮಾಡಿದ ಶಿಫಾರಸುಗಳ ಸಂಖ್ಯೆ |
|---|---|
| 3630 | 350 |